# ರಂಗವಿಠಲ

## ಮಾಸಪತ್ರಿಕೆ ಚಂದಾವಿವರ (Subscription)

ಮಾಸಪತ್ರಿಕೆ ಚಂದಾವಿವರ (Subscription)

| | |
|---|---|
| ದಶವಾರ್ಷಿಕ ಚಂದಾ (Ten Years) | 900-00 |
| ಪಂಚವಾರ್ಷಿಕ ಚಂದಾ (Five Years) | 450-00 |
| ತ್ರೈವಾರ್ಷಿಕ ಚಂದಾ (Three Years) | 275-00 |
| ವಾರ್ಷಿಕ ಚಂದಾ (Annual) | 100-00 |
| ಬಿಡಿ ಪ್ರತಿ (Per Copy) | 10-00 |

## ಜಾಹೀರಾತು ವಿವರ (Advertisement Tariff)

**With Colourful Photo's Size D 1/8 Multicolour Attractive Cover**

| | | | |
|---|---|---|---|
| Back Cover | 5000-00 | Half Page | 1250-00 |
| Inner Cover | 3000-00 | Full Page | 2000-00 |

## ಚಂದಾದಾರರಲ್ಲಿ ಮನವಿ

1) ಪತ್ರಿಕೆಗೆ ಹಣವನ್ನು ಕೊಡುವವರು ನಗದು/ಚೆಕ್ಕು/ಡಿಡಿ/ಎಂ.ಓ ಮೂಲಕ **ಸಂಪಾದಕರು ರಂಗವಿಠಲ**ದ ಹೆಸರಿನಲ್ಲಿ ಕೊಡಬಹುದು. ಚಂದಾದಾರರ ವಿಳಾಸದಲ್ಲಿ ಬದಲಾವಣೆಯಾದ ಪಕ್ಷದಲ್ಲಿ ಕೂಡಲೇ ತಿಳಿಸಬೇಕೆಂದು ವಿನಂತಿ.

2) ನಿಮ್ಮ ವಿಳಾಸದ ಚೀಟಿಯ ಪಕ್ಕದಲ್ಲಿ (ಉದಾಹರಣೆಗೆ -March-10) ಎಂದು ನಮೂದಿಸಲ್ಪಟ್ಟಿದ್ದಲ್ಲಿ ಆ ಸಂಚಿಕೆಯೊಂದಿಗೆ ಚಂದಾದಾರಿಕೆ ಮುಗಿಯುತ್ತದೆಂದು ತಿಳಿಯಬೇಕು. **ಪತ್ರಿಕೆಯನ್ನು ನವೀಕರಿಸುವಾಗ ತಪ್ಪದೇ ಚಂದಾದಾರರ ಸಂಖ್ಯೆಯನ್ನು ನಮೂದಿಸಬೇಕಾಗಿ ವಿನಂತಿ.**

***3) Renew your subscription immediately. Cheque/DD may be drawn in favour of Editor, Rangavittala, Bangalore. Quote your Subscription Number while corresponding.***

- **Please cirulate this magazine among friends & relatives.**
- **We seek your support for subscription promotion.**
- **You can also contribute Advertisement.**
- **DD/MO may please be sent to the following Address:**

ನಮ್ಮ ವಿಳಾಸ: *EDITOR, RANGAVITTALA*

***Sri Sripadaraja Mutt, No. 58, Raghavendra Colony, Chamarajapet, Bangalore-18. Phone : 26914637, 26914571***



# ರಂಗವಿಠಲ

ಶ್ರೀ ಶ್ರೀಪಾದರಾಜರ ಭಕ್ತಿಸಾಹಿತ್ಯ, ದಾಸಸಾಹಿತ್ಯ, ದೇವರನಾಮ, ಧರ್ಮಚಿಂತನೆ ಮತ್ತು ಜ್ಞಾನಸತ್ರಕ್ಕೆ ಮೀಸಲಾದ ಮಾಸಪತ್ರಿಕೆ

**ವಿರೋಧಿ, ಫಾಲ್ಗುಣ**

**ಮಾರ್ಚ್, 2010**

**March-2010**

(ಜಿಲ್ಲಾದಂಡಾಧಿಕಾರಿಗಳ ಮತ್ತು RNI ಅಧಿಕೃತ ಅನುಮೋದನೆ ನಂತರ ಇದು

**(ಸಂಪುಟ 1 ಸಂಚಿಕೆ 8)**

ಪತ್ರಿಕೆಯು ಪ್ರತಿ ತಿಂಗಳು 15 ರಂದು ಪ್ರಕಟವಾಗುತ್ತದೆ.)

Editor :
**H.B. Lakshminarayana**
No. 58, Raghavendra Colony, Chamarajpet,
Bangalore-560 018 Phone : (080) 26914637, 26914571

Publisher :
**Sri Sripadaraja Mutt**
Mulbagal, Kolar
Phone: 08159-290839

Printer :
**Sri Sripadaraja Printers & Publisher**
No. 58, Raghavendra Colony, Chamarajpet,
Bangalore-560 018. Phone : (080) 26914637

**Address: Postal / Courier / Email**

**Sri Sripadaraja Mutt**
No. 58, Raghavendra Colony, Chamarajpet,
Bangalore-560 018. Phone : (080) 26914637, 26914571
Webmail: Sripadarajamutt.org
Email: rangavittala.sripada@gmail.com



## ಸಂದೇಶ

**ಜ್ಞಾನಾಗ್ನಿಃ ಸರ್ವ ಕರ್ಮಾಣಿ ಭಸ್ಮಸಾತ್ ಕುರುತೇ ತಥಾ**

ಸಂಯಮವು ಸಂಸಾರಿಗೆ ನಿಯಮ . ಸಂಪೂರ್ಣ ನಿಗ್ರಹವು ಸನ್ಯಾಸ ಧರ್ಮ. ಸಾಧಕರು ಸಂಯಮಿಗಳಾಗಿರುವುದೇ ಉಜ್ಜೀವನ . ಸರ್ವಪಾಪಗಳನ್ನು ದಹಿಸುವ ವಾಸುದೇವನ ಅರಿವಿಗಾಗಿ ನಮ್ಮ ಬಾಳಾಗಬೇಕು. ಶ್ರೀಪಾದರಾಜರ ವಿದ್ಯಾ ಶಿಷ್ಯರಾಗಿ ಮೆರೆದ ವ್ಯಾಸರಾಜರು, ವಿಜಯೀಂದ್ರತೀರ್ಥರಿಗೂ, ವಾದಿರಾಜರಿಗೂ, ಪುರಂದರದಾಸರಿಗೂ, ಮತ್ತು ಕನಕದಾಸರಿಗೂ, ವಿದ್ಯಾ ಗುರುಗಳಾಗಿದ್ದಾರೆ. ವಾದಿರಾಜರ ಹಾಗೂ ವ್ಯಾಸರಾಜರ ಆರಾಧನೆಯ ಸಮಯ ಫಾಲ್ಗುಣಮಾಸದ **ರಂಗವಿಠಲ** ಸಂಚಿಕೆಯು **ಗುಂಡಕ್ರಿಯೆ** ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಶೋಭಿಸುತ್ತಿರುವುದು ಸಂತಸ ತಂದಿದೆ.

ಪ್ರಮೇಯ ಭರಿತ ಗ್ರಂಥವನ್ನು ಅವಲೋಕಿಸಿದಾಗ ಶ್ರೀಹರಿಯಲ್ಲಿ ಭಕ್ತಿಯುಂಟಾಗಿ ಆತನನ್ನೇ ಆಶ್ರಯಿಸಿರುವ ಮಹಾತ್ಮರ ಸಖ್ಯವು ಲಭಿಸುವುದರಲ್ಲಿ ಸಂದೇಹವಿಲ್ಲ.

ಜೀವೋತ್ತಮರಾದ ವಾಯುದೇವರ ಮಹಿಮೆಯನ್ನು ಕೊಂಡಾಡುವ ಸಂದೇಶದೊಂದಿಗೆ ಸಂಗೀತ ರಸಭರಿತವೂ, ತತ್ವಜ್ಞಾನ ಭಂಡಾರವೂ ಆದ **ಗುಂಡಕ್ರಿಯೆ** ಕೃತಿಯ ಬೆಳಕು ತೋರಿದ **ರಂಗವಿಠಲ** ಬಾಂಧವರಿಗೆ ಶುಭಹಾರೈಕೆ.

**ನಾರಾಯಣಸ್ಮರಣೆಗಳು**
**ಶ್ರೀ ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು**



## ಏಪ್ರೀಲ್ 2010ರ ಸಂಚಿಕೆಯಲ್ಲಿ

**ಅಧಿಕಮಾಸ ನಿಯಮಕನಾದ ಶ್ರೀ ಪುರುಷೋತ್ತಮನ ಬಗ್ಗೆ ದಾಸರುಗಳ ಚಿಂತನ ಧಾರೆಯನ್ನು ಏಪ್ರೀಲ್ 2010ರ ಸಂಚಿಕೆಯಲ್ಲಿ ರಂಗವಿಠ್ಠಲ ನೀಡಬಯಸುತ್ತದೆ. ತಮ್ಮ ಲೇಖನಗಳಲ್ಲಿ ಆಧಾರಿತ ಕೃತಿಗಳನ್ನು ಆಯ್ದುಕೊಂಡಿರುವ ಗ್ರಂಥದ ಹೆಸರು, ಪುಟ, ಕೀರ್ತನೆಗಳ ಸಂಖ್ಯೆಯನ್ನು ಹಾಗೂ ವಿಮರ್ಶಿಸಿರುವ ಕೃತಿ ಮತ್ತು ಅದರ ಲೇಖಕರ ಬಗ್ಗೆ ಮಾಹಿತಿಯನ್ನು ನೀಡಲೇ ಬೇಕಾಗಿಕೋರಿದೆ.**

ಓದುಗರು ತಮ್ಮ ಲೇಖನಗಳನ್ನು ಮಾರ್ಚ್ 25ರೊಳಗೆ ಕಳುಹಿಸಬೇಕೆಂದು ಕೋರಿದೆ. ತಮ್ಮ ಲೇಖನಗಳು ಶುದ್ಧಕೃತಿ ಮತ್ತು ತತ್ಸಂಬಂಧವಾದ ಪ್ರಮಾಣಗಳ ಪುರಸ್ಸರವಾಗಿದ್ದರೆ ಉತ್ತಮ.

**ಆಚಾರ-ವಿಚಾರದ ಬಗ್ಗೆ ಹರಿದಾಸರು ತೋರಿದ ಕಳಕಳಿ** ಮತ್ತು ಅವರ ಕೃತಿಗಳಲ್ಲಿ ವ್ಯಕ್ತಪಡಿಸಿರುವ ರೀತಿ. ಇವುಗಳ ಬಗ್ಗೆ ಮೇ 2010 **ರಂಗವಿಠ್ಠಲ**ದಲ್ಲಿ ಪ್ರಕಾಶಿಸುವ ಅಭಿಪ್ರಾಯವಿದೆ. ಲೇಖಕರು ದಯಮಾಡಿ ತಮ್ಮ ಲೇಖನಗಳನ್ನು ಏಪ್ರಿಲ್ 10 ರೊಳಗೆ ಕಳುಹಿಸಲು ಕೋರಿದೆ.

**ಸಂಪಾದಕ, ರಂಗವಿಠಲ.**

**ೀ ಶ್ರೀಪಾದರಾಜ ಮಠ (ಮುಳಬಾಗಿಲು ಮಠ) ಮೂಲ ಬೃಂದಾವನ ಸನ್ನಿಧಿ**
**ನರಸಿಂಹತೀರ್ಥ, ಮುಳಬಾಗಿಲು, ಕೋಲಾರ ಜಿಲ್ಲಾ, ದೂರವಾಣಿ: 08159-290[illegible]**

ಶ್ರೀಕ್ಷೇತ್ರದಲ್ಲಿ ನಡೆಯುವ ದೈನಂದಿನ ಕಾರ್ಯಕ್ರಮಗಳ ವಿವರ:-

ಬೆಳಿಗ್ಗೆ 05-30 ನಿರ್ಮಾಲ್ಯ ವಿಸರ್ಜನೆ.
08-30 ವಿಶೇಷ ದಿನಗಳಲ್ಲಿ ಶ್ರೀ ಯೋಗನರಸಿಂಹ ದೇವರಿಗೆ ಪಂಚಾಮೃತ (ಶ್ರೀಮಠದ ಕಟ್ಟಳೆ ಪ್ರಕಾರ ನೆರವೇರಿಸುವುದು).
8-30 ಶ್ರೀ ಯೋಗನರಸಿಂಹ ದೇವರ ಉತ್ಸವ ಮೂರ್ತಿಗೆ ಪ್ರತಿನಿತ್ಯ ಮಧು ಅಭಿಷೇಕ
09-00 ರಿಂದ 09-30 ಶ್ರೀ ಯೋಗನರಸಿಂಹ ದೇವರ ಪೂಜೆ.
10-00 ರಿಂದ 10-30 ಶ್ರೀ ಯೋಗನರಸಿಂಹ ದೇವರಿಗೆ ಅರ್ಚನೆ.
10-45 ರಿಂದ 11-00 ಶ್ರೀ ಶ್ರೀಪಾದರಾಜರಿಗೆ ಪಂಚಾಮೃತ ಅಭಿಷೇಕ.
11-00 ರಿಂದ 11-30 ಶ್ರೀ ಶ್ರೀಪಾದರಾಜರಿಗೆ ಸೇವೆಗಳು.
11-45 ನೈವೇದ್ಯ (ಶ್ರೀ ಯೋಗನರಸಿಂಹ ದೇವರು, ಶ್ರೀಮುಖ್ಯಪ್ರಾಣದೇವರು ಮುಂತಾದೆಡೆ)
12-00 ಗಂಟೆಗೆ ಹಸ್ತೋದಕ ಮತ್ತು ಮಹಾಮಂಗಳಾರತಿ
12-30 ರಿಂದ 02-00ರ ವರೆಗೆ ಮಹಾಪ್ರಸಾದ.
ಸಂಜೆ 06-00 ರಿಂದ 06-45 ಕ್ಕೆ ವಿಷ್ಣು ಸಹಸ್ರನಾಮ ಅರ್ಚನೆ, ದೀಪೋತ್ಸವಾದಿಗಳು
07-30 ಸಂಜೆ ಮಹಾಮಂಗಳಾರತಿ.
08-00ರ ವರೆಗೆ ಸಾರ್ವಜನಿಕ ದರ್ಶನಕ್ಕೆ ಅವಕಾಶ.

ಈ ಮೇಲ್ಕಂಡ ವ್ಯವಸ್ಥೆಯನ್ನು ದಿ. 1-2-2010ರಿಂದ ಶ್ರೀಗಳವರ ಅಪ್ಪಣೆಯ ಮೇರೆಗೆ ನಡೆಸುವಂತೆ ತೀರ್ಮಾನಿಸಲಾಗಿದೆ.

ಭಕ್ತಾದಿಗಳು ಕಾರ್ಯಕ್ರಮದ ವ್ಯವಸ್ಥೆಯ ದೃಷ್ಟಿಯಿಂದ ಸಹಕರಿಸಿ, ಪ್ರಯೋಜನವನ್ನು ಪಡೆಯಬೇಕಾಗಿ ತಿಳಿಸಲಾಗಿದೆ.

**ವಿಶೇಷ ಸೂಚನೆ:-** ಪಿತೃಕಾರ್ಯ ಮಾಡುವವರು ಆ ದಿನ ಬೆಳಿಗ್ಗೆ 9-00ಕ್ಕೆ ಸರಿಯಾಗಿ ಹಾಜರಿರತಕ್ಕದ್ದು. ತಡವಾಗಿ ಬಂದವರಿಗೆ ಅವಕಾಶವಿರುವದಿಲ್ಲ.

## ಶ್ರೀ ವಿಕೃತಿನಾಮ ಸಂವತ್ಸರ, ಚೈತ್ರಮಾಸ

**ಮಾರ್ಚ್ 2010**

**16.** ಚಾಂದ್ರಮಾನಯುಗಾದಿ ಶ್ರೀವಿಕೃತಿನಾಮ ಸಂವತ್ಸರಾರಂಭ, ಶ್ರೀರಾಮನವರಾತ್ರಾರಂಭ, ಬೇವು ಬೆಲ್ಲಸ್ವೀಕಾರ.

**17.** ಬಾಲೇಂದುಪೂಜ.

**18.** ಚೈತ್ರಗೌರಿತೃತೀಯಾ, ಮತ್ಸ್ಯಜಯಂತಿ.

**23.** ಬ್ರಹ್ಮಪುತ್ರಾನದೀಸ್ನಾನೇನ ವಿಶೇಷಫಲ, ಭವಾನ್ಯುತ್ಪತ್ತಿ

**24.** ಶ್ರೀರಾಮನವಮಿ, ಶ್ರೀಕವೀಂದ್ರತೀರ್ಥರ ಪುಣ್ಯ.ದಿನ. ***ಶ್ರೀಪ್ರಾಜ್ಞನಿಧಿತೀರ್ಥರ ಪುಣ್ಯ.ದಿನ.*** (ಮುಳಬಾಗಿಲು)

***26. ಸರ್ವೇಷಾಮೇಕಾದಸಿ(ಕಾಮದಾ)*** ಶ್ರೀಕೃಷ್ಣಡೋಲೋತ್ಸವ,

**27.** ಪಾರಣ, **ಅನಂಗತ್ರಯೋದಶಿ.** ಭೈರಕೂರು ಕೋದಂಡರಾಮ ರಥೋತ್ಸವಅಂಗವಾಗಿ ಕಲ್ಯಾಣೋತ್ಸವ ಶ್ರೀಮಠದ ವತಿಯಿಂದ

**28.** ಶ್ರೀಕೋದಂಡರಾಮಸ್ವಾಮಿ ರಥೋತ್ಸವ

**29.** ನೃಸಿಂಹ ಡೋಲೋತ್ಸವ.

**30.** ಚಿತ್ರಾಪೂರ್ಣಿಮಾ, **ಹನುಮಜಯಂತಿ,** ವೈಶಾಖಸ್ನಾನಾರಂಭ, **ಶ್ರೀಸತ್ಯವ್ರತತೀರ್ಥರ ಪುಣ್ಯ.ದಿನ.** (ಶ್ರೀರಂಗ) ಚಿತ್ರಾನ್ನ-ದಧ್ಯಾನ್ನದಾನ, ಶ್ರೀವಿಠಲನಾರಾಯಣಸ್ವಾಮಿ ರಥೋತ್ಸವ ಮುಳಬಾಗಲು.

**ಏಪ್ರಿಲ್ 2010**

**10. ಸರ್ವೇಷಾಮೇಕಾದಶಿ(ವರೂಥಿನಿ).**

**13.** ಕಾತ್ಯಾಯನಾನಾಂ ಪಿಂಡಪಿತೃಯಜ್ಞ.ಚೈತ್ರಾಂಗಾರ ಕೃಷ್ಣಚತುರ್ದಶಿ ಗಂಗಾಸ್ನಾನ ವಿಶೇಷಫಲ, ಕಾವೇರಿ ಸ್ನಾನ ಶ್ರೀರಂಗದಿಂದ ಸಮುದ್ರದವರೆಗೆ ಗಂಗಾಸ್ನಾನಫಲ 36 ವರ್ಷಕ್ಕೊಮ್ಮೆ ದೊರೆಯುವ ಯೋಗ.

**14.** ಅಕ್ಷಯತದಿಗೆ, ಅಮಾವಾಸ್ಯ, ದರ್ಶ.

**ಚೈತ್ರಮಾಸದಲ್ಲಿದವನ ಪೂಜೆಯ ವಿಶೇಷ**

17-03-10 ಬಿದಿಗೆ ಗೌರೀ ಶಿವರಿಗೆ - 19-03-10 ಚೌತಿ ಗಣೇಶನಿಗೆ

20-03-10 ಪಂಚಮಿ ನಾಗನಿಗೆ -21-03-10 ಷಷ್ಠಿ ಸ್ಕಂದನಿಗೆ

22-03-10 ಸಪ್ತಮಿ ಸೂರ್ಯನಿಗೆ - 23-03-10 ಅಷ್ಟಮಿ ದುರ್ಗಾದೇವಿಗೆ

25-03-10 ದಶಮಿ ಧರ್ಮರಾಜನಿಗೆ -27-03-10 ದ್ವಾದಶಿ ವಿಷ್ಣುವಿಗೆ

28-03-10 ತ್ರಯೋದಶಿ ಮನ್ಮಥನಿಗೆ 29-03-10 ಚತುರ್ದಶಿ ಶಿವನಿಗೆ

30-03-10 ಪೌರ್ಣಿಮಿ ಸರ್ವದೇವತೆಗಳಿಗೆ **(ಕೃಷ್ಣ ಪಕ್ಷ ಚತುರ್ದಶಿ,ಮಂಗಳವಾರ ಮೂರೂ ಸೇರಿದ ದಿನ ಮಣಿಪಾಲದ ಹತ್ತಿರ ಸ್ವರ್ಣಾನದಿಸ್ನಾನ ವಿಶೇಷ)**





## ಸಂದೇಶ

ಸರ್ವ ಶಕ್ತನಾದ ಶ್ರೀಹರಿಯು ತತ್ವಾಭಿಮಾನಿ ದೇವತೆಗಳಲ್ಲಿದ್ದು ಮಾಡುವ ಸೃಷ್ಟ್ಯಾದಿ ಮಹಿಮೆಗಳನ್ನು ವರ್ಣಿಸುವ ಭಾಗವತವು ಮೋಕ್ಷಪ್ರದ. ಜೀವರ ಉದ್ಧಾರಕ್ಕಾಗಿಯೇ ಪರಮಾತ್ಮನ ಸಕಲ ವ್ಯಾಪಾರಗಳು ಎಂದು ತಿಳಿಯಬೇಕು. ಪಿತೃತ್ವೇನ, ಸ್ವಾಮಿತ್ವೇನ, ಬಂಧುತ್ವೇನ, ಸಖಿತ್ವೇನ, ಗುರುತ್ವೇನ ಸರ್ವವೂ ಭಗವಂತನೇ ಎಂದು ಶರಣಾಗಬೇಕು. ಶರಣಾಗಿ ಅಪ್ರಮೇಯನಾದ ಸ್ವಾಮಿಯನ್ನು ಅರಿಯಬೇಕು. ಅರಿತು ಸಂಕೀರ್ತನಗೈಯ್ಯಬೇಕು. ಈ **ನಿರಂತರತೆಯನ್ನು** ಸಾರುವ **ಗುಂಡಕ್ರಿಯೆ** ವಾದಿರಾಜರ ಅಪೂರ್ವ ಕೃತಿ.

ಇಂತಹ ಕೃತಿ ಚಿಂತನ ಧಾರೆಯೆಂಬ ಅಮೃತಪಾನದಿಂದ ಅಭಿವೃದ್ಧವಾದ ಭಕ್ತಿಯಿಂದ ಮನಃಶುದ್ಧಿಯನ್ನು ಪಡೆಯಬೇಕು. ಅದರಿಂದ ಜ್ಞಾನ-ಭಕ್ತಿ-ವೈರಾಗ್ಯಗಳ ದಾರ್ಢ್ಯದಿಂದ ವೈಕುಂಠಾದಿ ನಿತ್ಯ ಸುಖವನ್ನು ಹೊಂದಲು ದಾರಿ ಸುಗಮವಾಗುತ್ತದೆ.

ಇಂತಹ ಅಪೂರ್ವ **ಚಿಂತನ-ಸಿಂಚನ** ಶೋಭೆಯೊಂದಿಗೆ **ರಂಗವಿಠಲ** ಮೂಡಿರುವುದು ಸ್ವಾಗತಾರ್ಹ. ಓದುಗ, ಲೇಖಕ ಬಂಧುಗಳಿಗೂ ಈ ಸಂಚಿಕೆಯು **ಫಲಪ್ರದವಾಗಲೆಂದು** ನಮ್ಮ ಆಶಯ.

**ನಾರಾಯಣಸ್ಮರಣೆಗಳು**
**ಶ್ರೀ ಶ್ರೀ ಕೇಶವನಿಧಿತೀರ್ಥ ಶ್ರೀಪಾದಂಗಳವರು**

## ಸಂಪಾದಕೀಯ

ಬಾಳಿನ ಹೋರಾಟದಲ್ಲಿ ಭಗವಂತನ ಕೃಪೆಯಾದಾಗ ಮಾತ್ರ ಬಾಳು ಸಾರ್ಥಕ. ಆದರೆ ಅದೆಷ್ಟೋ ಬಾರಿ ಗೆಲುವಿನ ಸಂಭ್ರಮದಲ್ಲಿ ತಮ್ಮ ಪೌರುಷವನ್ನೇ ಕೊಚ್ಚಿಕೊಳ್ಳುತ್ತಾ ಜನ ಬೀಗುತ್ತಾರೆ. ಸಾಮಾನ್ಯ ಮನುಷ್ಯರು, ಹಾಗೂ ದೇವತೆಗಳು ಆ ರೀತಿ **ಅಹಂ** ನ ಮೋಡಿಗೆ ಒಳಗಾದಾಗ ಅವರ ಕಣ್ತೆರೆಸಲು ವಾಯುದೇವರು ಬಿಂಬಿಸುವ ಸನ್ನಿವೇಶವನ್ನೇ ವಾದಿರಾಜರು **ಗುಂಡಕ್ರಿಯೆ** ಕೃತಿಗೆ ಕಥಾವಸ್ತುವನ್ನಾಗಿ ಆರಿಸಿಕೊಂಡರು. ಚಿಕ್ಕದಾಗಿ ಹಾಗೂ ಚೊಕ್ಕವಾಗಿ ನಿರ್ಮಾಣಗೊಂಡ **ಗುಂಡಕ್ರಿಯೆ** ಚಿಂತನಧಾರೆಯ ಸಂಚಿಕೆಯಾಗಿ **ರಂಗವಿಠಲ** ತಮ್ಮ ಕೈ ಸೇರಿದೆ.

ಮಾನವನು ತಿಳಿದೂ-ತಿಳಿಯದೆ ಮಾಡಿದ ಎಲ್ಲ ಪಾಪಗಳಿಂದ ಮುಕ್ತನಾಗಲು ಪಾಪ ಪುರುಷನ ದಹನ ಮಾಡಬೇಕು. ದುಷ್ಟಾಲೋಚನೆ ಮತ್ತು ದುಷ್ಟ ಶಕ್ತಿಗಳನ್ನು ಗೆಲ್ಲಲು ಮನಸ್ಸನ್ನು ನಿರ್ಮಲಗೊಳಿಸಬೇಕು. ಶುದ್ಧಿಗೊಳಿಸಲು ಸುಲಭೋಪಾಯ **ಹರಿಃ ಹರತಿ ಪಾಪಾನಿ** ಎಂಬಂತೆ ಸದಾ ಹರಿಸ್ಮರಣೆ ಮಾಡುತ್ತಿರಬೇಕು.

ಹೃದಯಾಬ್ಜವುಂಟಪದಲ್ಲಿ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ವಾಸುದೇವನನ್ನು ಸ್ಮರಿಸುತ್ತಾ ಧ್ಯಾನ ಮಾಡಬೇಕು.

ಹೀಗೆ ಸಾಧನೆ ಮಾಡಲು **ಹಯವದನಾಂಕಿತರಾದ ವಾದಿರಾಜರ** ಉಪದೇಶವು **ಗುಂಡಕ್ರಿಯೆ** ಕೃತಿಯಿಂದ ತಿಳಿಯಬಹುದು..

ಸಹೃದಯ ಓದುಗರಿಗೂ, ಲೇಖಕರಿಗೂ, ಹಾಗೂ ರಂಗವಿಠಲ ಬಂಧುಗಳೆಲ್ಲರಿಗೂ **ವಿಕೃತಿನಾಮ ಸಂವತ್ಸರದ ಅಭಿನಂದನೆಗಳು ಹಾಗೂ ಯುಗಾದಿಯ ಶುಭಾಶಯಗಳು.**

**ಸಂಪಾದಕ, ರಂಗವಿಠ**



**ಶ್ರೀಮಠದ**

**ಕಾರ್ಯಕ್ರಮಗಳು**

## ಶಾಖಾಮಠದ ವರದಿ

ಹೊಸೂರು ಶಾಖೆಯಲ್ಲಿ ಪ್ರತಿ ವರ್ಷದಂತೆಯೇ ಈ ವರ್ಷವೂ ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಸ್ಥೈರ್ಯ ಮಾನೋದಾರ್ಢ್ಯ ಹಾಗೂ ತೇಜಸ್ಸನ್ನು ಹೊಂದುವ ಸಲುವಾಗಿ, ಮಾರ್ಚ್ 17ರಂದು ಸರಸ್ವತಿ ಹೋಮವನ್ನು ಏರ್ಪಡಿಸಲಾಗಿದೆ.

* * *

ಸಾರ್ವಜನಿಕರ ಹಿತಕ್ಕಾಗಿ ತಿರುಪತಿ ಶ್ರೀನಿವಾಸನ ಉತ್ಸವಮೂರ್ತಿಗೆ **ಕಲ್ಯಾಣೋತ್ಸವ**

25.3.2010 ಗುರುವಾರ ಮಧ್ಯಾಹ್ನ 3 ಗಂಟೆಗೆ ಸರಿಯಾಗಿ ಹೊಸೂರು ಬೋಸ್ ಬಜಾರ ರಸ್ತೇಯಲ್ಲಿರುವ ಶ್ರೀರಾಮದೇವರ ದೇವಸ್ಥಾನದಿಂದ ಹೊರಟು ಶ್ರೀರಾಘವೇಂದ್ರಸ್ವಾಮಿ ಬೃಂದಾವನ ಸನ್ನಿಧಿ ಶ್ರೀಪಾದರಾಜ ಮಠದ ಮುಂದೆ ಹಾಯ್ದು ಕಾಮರಾಜಾ ಕಾಲೋನಿಯಲ್ಲಿರುವ ಸರ್ಕಾರಿ ಬಾಯ್ಸ್‌ಸ್ಕೂಲಿನವರೆಗೆ ಶ್ರೀನಿವಾಸನ ಉತ್ಸವಮೂರ್ತಿಗೆ ಅಮೋಘವಾದ ಮೆರವಣಿಗೆಯನ್ನು ಏರ್ಪಡಿಸಲಾಗಿದೆ.

ಸಂಜೆ 5-30ರಿಂದ ಕಲ್ಯಾಣೋತ್ಸವ ಪ್ರಾರಂಭ.

ತಿರುಪತಿ ತಿರುಮಲೆ ದೇವಸ್ಥಾನದ ದಾಸಸಾಹಿತ್ಯ ಪ್ರಾಜೆಕ್ಟ್‌ನವರು ನಡೆಸಿಕೊಡುತ್ತಾರೆ ಹೊಸೂರು ಶ್ರೀಪಾದರಾಜರ ಮಠದವತಿಯಿಂದ ಆಯೋಜಿಸಿರುತ್ತಾರೆ.

**ವರದಿ : ಕೃಷ್ಣಸುಬ್ಬಣ್ಣ**
**ಹೊಸೂರು.**


## ಮಾಹಿತಿ ಸಂಗ್ರಹ (Data Bank)

ಮಾಧ್ವಮಠಗಳಲ್ಲಿ ಹಾಗೂ ಮಾಧ್ವ ಸಂಸ್ಥೆಗಳಲ್ಲಿ ಕೆಳಕಂಡ ಹುದ್ದೆಗಳಿಗಾಗಿ **ರಂಗವಿಠಲ** ಕಾರ್ಯಾಲಯವು ಮಾಹಿತಿ ಸಂಗ್ರಹದ ಕಾರ್ಯದಲ್ಲಿ ತೊಡಗಿರುವುದರಿಂದ ಸತ್ಸಂಪ್ರದಾಯ ಹೊಂದಿದ ಮಾಧ್ವರು ಮಾತ್ರ ಅರ್ಜಿಯನ್ನು ಕಳುಹಿಸಬೇಕಾಗಿ ತಿಳಿಸಲಾಗಿದೆ. ಯುವಜನರಿಗೆ ವಿಶೇಷ ಬೇಡಿಕೆ ಇರುತ್ತದೆ.

ವಿದ್ವಾಂಸರು, ವೇದಪಾರಂಗತರು, ಉಪನ್ಯಾಸಕರು, ಅಧ್ಯಾಪಕರು, ಪುರೋಹಿತರು (ತ್ರಿಮತಸ್ಥರು), ಅರ್ಚಕರು, ನುರಿತ ಅಡಿಗೆಯವರು, ಆಫೀಸ್ ಮ್ಯಾನೇಜರ್, ಡಿ.ಟಿ.ಪಿ , Proof Readers, ಲೆಕ್ಕ ಪರಿಶೋಧಕರು (Accountant)

ಉದ್ಯೋಗಾವಕಾಶವನ್ನು ಒದಗಿಸಲು ಹಾಗೂ ಸಂಸ್ಥೆಗಳಿಗೆ ನೆರವಾಗಲು **ರಂಗವಿಠಲ** ಹಮ್ಮಿಕೊಂಡಿರುವ ಮಾಹಿತಿ ಸಂಗ್ರಹ ಯೋಜನೆ.

ವಿವರಗಳೊಂದಿಗೆ ಕೂಡಲೇ ಸಂಪರ್ಕಿಸಿ :
**ರಂಗವಿಠಲ ಕಾರ್ಯಾಲಯ**
ನಂ. 58, ರಾಘವೇಂದ್ರ ಕಾಲೋನಿ, ಚಾಮರಾಜಪೇಟೆ, ಬೆಂಗಳೂರು-18 ದೂರವಾಣಿ
080-26914637.rangavittala.sripada@gmail.com

**ಶ್ರೀಮಠದ**

**ಕಾರ್ಯಕ್ರಮಗಳು**

## ಶಾಖಾಮಠದ ವರದಿ

ವಿರೋಧಿನಾಮ ಸಂವತ್ಸರದ ಮಹಾಸಮಾರಾಧನೆಯನ್ನು ಈರೋಡು ಶಾಖೆಯಲ್ಲಿ ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು.



2-3-2010ರಂದು ಈರೋಡು ಶ್ರೀಪಾದರಾಜ ಮಠದ ಶಾಖೆಯಲ್ಲಿ ಶ್ರೀವಿಜಯನಿಧಿತೀರ್ಥರ ಮಹಾಸಮಾರಾಧನೆ, ಶ್ರೀರಾಘವೇಂದ್ರಸ್ವಾಮಿ ಮಠದ ಶ್ರೀಸುಧೀಂದ್ರತೀರ್ಥರ ಆರಾಧನೆ ಹಾಗೂ ಶ್ರೀವಾದಿರಾಜತೀರ್ಥರ ಪೂರ್ವಾರಾಧನೆಯ ನೆರವೇರಿತು. ಉತ್ತರಾಧಿಮಠದ ಪೀಠಾಧೀಶರಾದ ಶ್ರೀ ಶ್ರೀ 108 ಸತ್ಯಾತ್ಮತೀರ್ಥರ ಉಪಸ್ಥಿಯಲ್ಲಿ ಸಂಸ್ಥಾನ ಪೂಜೆ ಗುರುರಾಜರಿಗೆ ಹಸ್ತೋದಕ ಇತ್ಯಾದಿ ಕಾರ್ಯಕ್ರಮಗಳಿಂದ ವಿಜೃಂಭಿಸಿತು.






**ವರದಿ ಸಂಗ್ರಹಕರು: ಪಿ. ಕೃಷ್ಣಮೂರ್ತಿಆಚಾರ್**
**ಪುದು ಅಗ್ರಹಾರಂ, ಈರೋಡ್**



**ವಾದಿರಾಜರು ಹೇಳಿದ ಕಥೆಗಳು**

## ಸರ್ವೋತ್ತಮನಾದ ವಿಷ್ಣು

**ಶೋಧಿಸೆ ಬಂದ ಭೃಗುವನರಿಯದೆ ವೃಥಾ**
**ಕ್ರೋಧವ ಮಾಡಿದ ಕಾರಣ॥**

**- ಶ್ರೀಹರಿದಾಸ ಭಾರತೀಗ್ರಂಥರತ್ನಮಾಲೆ ಪುಟ 71**

ಶ್ರೀಭಾಗವತದ 10ನೇ ಸ್ಕಂದದ ಉತ್ತರಾರ್ಧ 93ನೇ ಅಧ್ಯಾಯದಲ್ಲಿ ಬರುವ ವಿಷಯವನ್ನು ಕಥಾರೂಪಕವಾಗಿ ವಾದಿರಾಜರು ವಿವರಿಸಿದ್ದಾರೆ.

ಪ್ರಯಾಗ ಕ್ಷೇತ್ರದಲ್ಲಿ ಸತ್ರಯಾಗವಾಗುತ್ತಿದ್ದಾಗ ಋಷಿಗಳ ಸಮೂಹವು ತ್ರಿಮೂರ್ತಿಗಳಲ್ಲಿ ಯಾರು ಶ್ರೇಷ್ಠರೆಂಬುದನ್ನು ನಿರ್ಧರಿಸಲು ಭೃಗು ಋಷಿಗಳನ್ನು ನಿಯೋಜಿಸುತ್ತಾರೆ.

ಭೃಗು ಋಷಿಗಳು ಬ್ರಹ್ಮನ ಸಭೆಗೆ ಹೋಗುತ್ತಾರೆ. ಅಲ್ಲಿ ಬ್ರಹ್ಮನು ಸ್ವಾಗತಿಸಿ ಸತ್ಕರಿಸಲಿಲ್ಲ. ಅಲ್ಲಿಂದ ಕೈಲಾಸಕ್ಕೆ ಹೋಗುತ್ತಾರೆ. ಮಹೇಶನು ಅವರನ್ನು ಸೌಹಾರ್ಧದಿಂದ ಆಲಿಂಗಿಸಲು ಬರುತ್ತಾನೆ. ಭೃಗು ಋಷಿಯು, ಶಿವನು ಕಪಾಲಪಾಣಿ, ಸ್ಮಶಾನವಾಸಿ ಎಂಬ ಕಾರಣದಿಂದ ಸ್ಪರ್ಶಿಸಲು ಇಚ್ಛಿಸಲಿಲ್ಲ. ಶಿವನು ಕುಪಿತನಾಗಿ ಶೂಲವನ್ನೆತ್ತಿ ನುಗ್ಗಿದನು. ಪಾರ್ವತಿಯು ಶಿವನನ್ನು ಸಮಾಧಾನಪಡಿಸಿದಳು.

ನಂತರ ಭೃಗುಋಷಿಗಳು ವೈಕುಂಠಕ್ಕೆ ಹೊರಟರು. ಅಲ್ಲಿ ವಿಷ್ಣು ಮತ್ತು ಲಕ್ಷ್ಮೀಯರ ಆದರ, ಆತಿಥ್ಯವು ಬಹಳ ಸಂತೋಷಗೊಳಿಸಿತು. ಯದ್ಯಪಿ ಬ್ರಹ್ಮ ರುದ್ರರಿಗೆ ಋಷಿಗಳು ಏಕೆ ಬಂದಿದ್ದರು ಎಂದು ತಿಳಿದಿತ್ತು. ತಾವು ಕ್ರೋಧವನ್ನು ವ್ಯಕ್ತಪಡಿಸದಿದ್ದಲ್ಲಿ ಸತ್ರಯಾಗದಲ್ಲಿ ಬ್ರಹ್ಮ, ವಿಷ್ಣು, ರುದ್ರರ ತಾರತಮ್ಯವು ತಿಳಿಯದೇ ಹೋಗುತ್ತದೆ ಎಂದು ತಿಳಿದು ಬ್ರಹ್ಮರುದ್ರರು ಕ್ರೋಧವನ್ನು ವ್ಯಕ್ತಪಡಿಸಿದರು.

**ಶ್ರೀ ಶ್ರೀವಿಜ್ಞಾನನಿಧಿತೀರ್ಥರು**

**ವಾದಿರಾಜರು ಹೇಳಿದ ಕಥೆಗಳು**

## ಸರ್ವಶಕ್ತನಾದ ವಿಷ್ಣು

**ಆವನ್ನ ರೋಮಕೂಪದೊಳಗೀಜೀವ**
**ದಾವಾಸವಾದ**

- ಶ್ರೀಹರಿದಾಸ ಭಾರತೀಗ್ರಂಥರತ್ನಮಾಲೆ ಪುಟ 73

ಈ ಮೇಲಿನ ಸಾಲುಗಳನ್ನು ಭಾಗವತ ತಾತ್ಪರ್ಯನಿರ್ಣಯ ಮೊದಲಾದ ಗ್ರಂಥಗಳಿಂದ ತೆಗೆದುಕೊಂಡಿದ್ದಾರೆ. ವಾದಿರಾಜರು ಜಾಂಬುವಂತ ಮತ್ತು ಕೃಷ್ಣನಿಗಾದ ಯುದ್ಧದ ಸನ್ನಿವೇಶವನ್ನು ಇಲ್ಲಿ ತಿಳಿಸುತ್ತಾರೆ.

ಸತ್ರಾಜಿತನು ಶ್ಯಮಂತಕಮಣಿಯ ಕಳ್ಳತನವನ್ನು ಕೃಷ್ಣನ ಮೇಲೆ ಹೊರಿಸುತ್ತಾನೆ. ಶ್ರೀಕೃಷ್ಣನು ತನ್ನ ಮೇಲೆ ಬಂದ ದೋಷ ನಿವಾರಣೆಗಾಗಿ ಶ್ಯಮಂತಕಮಣಿಯನ್ನು ಹುಡುಕಿಕೊಂಡು ಹೋಗುತ್ತಾನೆ. ಜಾಂಬುವಂತನ ಗುಹೆಯನ್ನು ಪ್ರವೇಶಿಸಿದಾಗ ಜಾಂಬುವಂತ ಕೃಷ್ಣನನ್ನು ಕಂಡು ಯುದ್ಧವನ್ನು ಪ್ರಾರಂಭಿಸುತ್ತಾನೆ.

ಯುದ್ಧವು ಅತಿರೇಕ ತಲುಪಲು ಕೃಷ್ಣನು ರಾಮರೂಪವನ್ನು ತೋರಿಸುತ್ತಾನೆ. ಜಾಂಬುವಂತನು ರಾಮನ ಬಂಟನಾದ್ದರಿಂದ ತಕ್ಷಣ ರಾಮಾಭಿನ್ನನಾದ ಶ್ರೀ ಕೃಷ್ಣನಿಗೆ ನಮಸ್ಕರಿಸುತ್ತಾನೆ.

ಈ ಸಾಮರ್ಥ್ಯವು ವಿಷ್ಣುವಿಗಲ್ಲದೇ ಮತ್ತಾರಿಗೂ ಇಲ್ಲ. ಹರಿಯ ಪ್ರತಿಯೊಂದು ರೂಪವೂ ಅನಂತ ರೂಪವನ್ನೊಳಗೊಂಡಿದೆ. ಶ್ರೀಹರಿಯು ಯಾವ ಸಮಯದಲ್ಲಿ ಯಾವ ರೂಪವನ್ನು ಬೇಕಾದರೂ ಧರಿಸಬಲ್ಲ. ಅಣುಕಾಲ, ಮಹಾಕಾಲ, ಪರಮಾಣ್ವಾದ್ಯವಸ್ಥೆಗಳಿಗೆ ನಿಯಾಮಕನಾಗಿ ತತ್ತತ್ ರೂಪದಿಂದ ಹರಿಯು ಇರುತ್ತಾನೆ. ಶ್ರೀವಿಷ್ಣುವಿನ ಒಂದೊಂದು ರೋಮಕೂಪವೂ ಅತಿಶಯವಾದ ಮಹಿಮೆಯನ್ನು ಹೊಂದಿದೆ. ಆದ್ದರಿಂದ ವಿಷ್ಣು ಸದೃಶವಾದ ವಸ್ತುವನ್ನು ಕಲ್ಪಿಸಲಿಕ್ಕೂ ಶಕ್ಯವಿಲ್ಲ.

**ಶ್ರೀ ಶ್ರೀವಿಜ್ಞಾನನಿಧಿತೀರ್ಥರು**



**ಶ್ರೀಮಠದ**
**ಒಂದು ವರದಿ**

**ಪುರಪ್ರವೇಶವನ್ನು** ನಡೆಸಿ ಸಭೆಗೆ ಅಧ್ಯಕ್ಷರನ್ನಾಗಿ ಮಾಡಿದರು.ಸೇಲಂ ಮತ್ತು ಚೆನ್ನೈನಲ್ಲಿ ರಾಘವೇಂದ್ರ ಸಪ್ತಾಹಕಾರ್ಯದಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದರು.

ಹೆಬ್ಬಣಿ ಗ್ರಾಮದಲ್ಲಿ ಶ್ರೀಕೇಶವನ ಪ್ರತಿಷ್ಠೆ ಹಾಗೂ ತಮಿಳುನಾಡಿನ ಕೃಷ್ಣಗಿರಿಯಲ್ಲಿ ಆಂಜನೇಯ ದೇವಸ್ಥಾನದ ಭೂಮಿ ಪೂಜೆ, ತುಮಕೂರು ಜಿಲ್ಲೆ ದೊಡ್ಡಬೆಲೆ ಮತ್ತು ತಮಿಳುನಾಡು ಐಯನೂರು ಗ್ರಾಮಗಳಲ್ಲಿ ಆಂಜನೇಯ ದೇವಸ್ಥಾನದ ಕುಂಭಾಭಿಷೇಕ ಹೀಗೆ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಭಾಗಿಗಳಾಗಿ ವಿಜೃಂಭಿಸಿದರು.

ಮೈಸೂರು ಜಿಲ್ಲೆಯ ತಾಯೂರಿನಲ್ಲಿರುವ ಶ್ರೀಗುಣನಿಧಿಗಳ ಆರಾಧನೆಯನ್ನು ನೂರು ವರ್ಷಗಳ ನಂತರ ಮೊದಲ ಬಾರಿಗೆ ಬೃಂದಾವನ ಸನ್ನಿಧಿಯಲ್ಲಿ ನೆರವೇರಿಸಲಾಯಿತು.

ದಾಸಸಾಹಿತ್ಯ ಪ್ರಚಾರಕಾರ್ಯದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿದ್ದರು.

ಬೊಮ್ಮಗಟ್ಟದ ಹುಲಿಕುಂಟೆರಾಯನ ರಥೋತ್ಸವ ಸಮಿತಿಯು ಶ್ರೀಗಳವರನ್ನು ಸನ್ಮಾನಪೂರ್ವಕ ಗೌರವಿಸಿದರು, ವ್ಯಾಸ-ದಾಸ ಸಾಹಿತ್ಯ ಸಭೆಯ ಅಧ್ಯಕ್ಷತೆಯನ್ನು ಶ್ರೀಗಳವರು ವಹಿಸಿದರು. ರಜತ ರಥವು ಬೊಮ್ಮಗಟ್ಟದ ಹುಲಿಕುಂಟೆರಾಯನಿಗೆ ಶ್ರೀಗಳವರ ಅಮೃತಹಸ್ತದಿಂದ ಸಮರ್ಪಿಸಲ್ಪಟ್ಟಿತು.

**ವರದಿ ಸಂಗ್ರಾಹಕ : ಭಕ್ತರಹಳ್ಳಿ ರಾಘವೇಂದ್ರರಾವ್**
**ನಂ. 1249, ಎರಡನೆ ಹಂತ, 10ನೇ ಮುಖ್ಯರಸ್ತೆ 11ನೇ, ಬಿ ಅಡ್ಡರಸ್ತೆ ಬೆಂಗಳೂರು-86**

**ಶ್ರೀರಾಮೋತ್ಸವದ ಪ್ರಯುಕ್ತ ವಿಶೇಷ ಪ್ರವಚನ ಸಪ್ತಾಹದ ಅಂಗವಾಗಿ**

**ಪ್ರವಚನ ಕೇಸರಿ ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯರವರಿಂದ**

**ದಿನಾಂಕ 18-3-2010 ರಿಂದ 24-3-2010ರವರೆಗೆ**
**ಶ್ರೀಮದ್ರಾಮಾಯಣ ಪ್ರವಚನ**

**ಶ್ರೀವಿಜಯವಿಠಲ ಸಂಗೀತ ಕಲಾವೇದಿಕೆ**
**ಸಂಪಿಗೆ ರಸ್ತೆ (ಫುಡ್‌ವರ್ಲ್ಡ್ ಎದುರು) ಮಲ್ಲೇಶ್ವರಂ, ಬೆಂಗಳೂರು-3**
**ದೂರವಾಣಿ : 9845410128.**

**ಶ್ರೀಮಠದ**

**ಒಂದು ವರದಿ**

ಈ ಕಾರ್ಯಕ್ರಮದಲ್ಲಿ **ಶ್ರೀಮಾಧವತೀರ್ಥ** ಸಂಸ್ಥಾನದ ಉಭಯ ಶ್ರೀಪಾದಂಗಳವರು ಹಾಗೂ **ಶ್ರೀ ವ್ಯಾಸರಾಜ** ಸಂಸ್ಥಾನದ ಶ್ರೀಗಳವರೂ ಸಹ ಉಪಸ್ಥಿತರಿದ್ದರು. ಎಲ್ಲ ಯತಿವರೇಣ್ಯರನ್ನೂ ಸನ್ಮಾನಿಸಲಾಯಿತು.

ಶ್ರೀರಂಗಕ್ಷೇತ್ರಕ್ಕೆ **ಶ್ರೀಸ್ವರ್ಣವರ್ಣತೀರ್ಥರ** ಆರಾಧನಾಸಲುವಾಗಿ ಸಂಚರಿಸಿದಾಗ, ಶ್ರೀರಂಗದ ಭಕ್ತ ಸಮುದಾಯವು **ಪುರಪ್ರವೇಶ** ಕಾರ್ಯಕ್ರಮವನ್ನು ಏರ್ಪಡಿಸಿದ್ದರು, ಸಕಲ ಮರ್ಯಾದೆಯಿಂದ ಶ್ರೀಗಳವರನ್ನು ಬರಮಾಡಿಕೊಂಡರು. **ಶ್ರೀಸ್ವರ್ಣವರ್ಣತೀರ್ಥರ ಆರಾಧನೆ**ಯನ್ನು ನೆರವೇರಿಸಿದನಂತರ ಶ್ರೀಮಠಕ್ಕೆ ಸಲ್ಲಬೇಕಾದ ದೇವಸ್ಥಾನದ ಸಕಲ ಮರ್ಯಾದೆಗಳೊಂದಿಗೆ, ಶ್ರೀರಂಗನಾಥನ ಮತ್ತು ಪರವಾಸುದೇವನ ದರ್ಶನಕ್ಕೆ ದೇವಸ್ಥಾನದವರು ಅಣಿಮಾಡಿಕೊಟ್ಟರು.

ಶ್ರೀರಂಗದಲ್ಲಿ ಚಂದ್ರಪುಷ್ಕರಿಣೀ ತೀರದ **ಶ್ರೀಪರಶುರಾಮತೀರ್ಥರ** ಹಾಗೂ ರಂಗನಾಯಕಿ ದೇವಸ್ಥಾನದಲ್ಲಿರುವ **ಶ್ರೀ ಆದಿರಾಜತೀರ್ಥರ** ದರ್ಶನವನ್ನು ಪಡೆದ ನಂತರ ಶ್ರೀಗಳವರು ಶ್ರೀಮುಷ್ಣಕ್ಷೇತ್ರಕ್ಕೆ ತೆರಳಿ ಅಲ್ಲಿಯೂ ದೇವಸ್ಥಾನದಿಂದ ಶ್ರೀಮಠಕ್ಕೆ ಸಲ್ಲಬೇಕಾದ ಸಕಲ ಮರ್ಯಾದೆಯನ್ನು ಸ್ವೀಕರಿಸಿ, ಪುಷ್ಕರಿಣೀ ದಡದಲ್ಲಿರುವ ಶ್ರೀಪಾದರಾಜರಿಂದ ಪ್ರತಿಷ್ಠಿತವಾದ ಶ್ರೀಲಕ್ಷ್ಮೀನಾರಾಯಣ ದೇವರಿಗೆ ಪ್ರಾರ್ಥನೆಯನ್ನು ಸಲ್ಲಿಸಿದರು.

ಪ್ರತಿವರ್ಷದಂತೆಯೇ ಆಷಾಡಮಾಸದಿಂದ ಭಾದ್ರಪದಮಾಸದವರೆಗೆ ನಡೆಸುವ ಚಾತುರ್ಮಾಸ್ಯವನ್ನು ಈ ವರ್ಷ ಹರಿದ್ವಾರ-ಗಂಗಾನದಿಯ ತೀರದಲ್ಲಿ ಶಿಷ್ಯವೃಂದದಿಂದ ಕೂಡಿ ವಿಜೃಂಭಣೆಯಿಂದ ಆಚರಿಸಲಾಯಿತು. ಪ್ರತಿನಿತ್ಯವೂ ಶ್ರೀಪಾದರಾಜರ ಉತ್ಸವಮೂರ್ತಿಗೆ ಗಂಗಾಸ್ನಾನ, ಗಂಗಾಭಿಷೇಕ ಮತ್ತು ಪಾಠ-ಪ್ರವಚನ, ಸಂಸ್ಥಾನ ಪೂಜೆ ಇತ್ಯಾದಿ ಕಾರ್ಯಕ್ರಮಗಳು ಅವ್ಯಾಹತವಾಗಿ ನಡೆದವು.

ಸೀಮೋಲ್ಲಂಘನದ ಅಂಗವಾಗಿ ಹರಿದ್ವಾರದಿಂದ ಬದರೀಕ್ಷೇತ್ರಕ್ಕೆ ಯಾತ್ರೆಯನ್ನು ಕೈಗೊಂಡರು. ಬದರೀನಾರಾಯಣನ ದರ್ಶನಲಾಭದ ನಂತರ ಮುಳಬಾಗಿಲಿನ ನರಸಿಂಹತೀರ್ಥಕ್ಕೆ ಬಂದು ತಲಪಿದರು.

ಚಿತ್ರದುರ್ಗದಲ್ಲಿ ಹರಿದಾಸ ಹಬ್ಬದ ಸಮಿತಿಯವರು ಶ್ರೀಗಳಿಗೆ ವಿಜೃಂಭಣೆಯ



**ವಾದಿರಾಜರು ಹೇಳಿದ ಕಥೆಗಳು**

# ಆದ್ಯನಾದ ನಾರಾಯಣ

**ಇದ್ದ ದೇವಮಾನವರ ಮಾತಿನೊಳು**
**ಶ್ರದ್ಧೆಯ ಮಾಡುವರು ಲೋಕದವರು**
**ಬುದ್ಧ ಸ್ವರೂಪದಿಂದ**

- ಶ್ರೀಹರಿದಾಸ ಭಾರತೀ ಗ್ರಂಥರತ್ನಮಾಲೆ (ಪುಟ 7)

ಶ್ರೀವಾದಿರಾಜರು ಎಲ್ಲಾ ಮತಗಳನ್ನು ನಿರಾಕರಿಸುವ ಸಲುವಾಗಿ ಗುಂಡಕ್ರಿಯೆಯನ್ನು ನೀಡಿದ್ದಾರೆ. ಈ ಮೇಲಿನ ಸಾಲುಗಳಲ್ಲಿ ತತ್ವವಿದ್ಯೆಯನ್ನು ಸತ್‌ಸಂಪ್ರದಾಯಗಳನ್ನು ಪ್ರಭಾವರಹಿತವನ್ನಾಗಿಸಲು ಹರಿಯ ಬೌದ್ಧಾವತಾರ ಕಥೆಯನ್ನು ತಿಳಿಸುತ್ತಾರೆ.

ರುದ್ರದೇವರಿಂದ ಸಂಹೃತರಾದ **ತ್ರಿಪುರಾಸುರ**ರು ಭೂಮಿಯಲ್ಲಿ ಹುಟ್ಟುತ್ತಾರೆ. 8000ವರ್ಷ ಕಲಿಯುಗ ಕಳೆದಿತ್ತು. ವೇದವಿದ್ಯೆಗಳನ್ನು ಧ್ವಂಸಮಾಡಲು ಪ್ರವೃತ್ತರಾದರು. ಇದನ್ನರಿತ ದೇವತೆಗಳು ವಿಷ್ಣುವನ್ನು ಮೊರೆಹೋದರು. ತ್ರಿಪುರಾಸುರರಲ್ಲಿ ಪ್ರಧಾನನಾದ ಅಸುರನು **ಶುದ್ಧೋದಕ**ನಾಮ ರಾಜನಾಗಿದ್ದನು, ಆತನ ರಾಣಿಯು **ಗಯಾನಾಮಕಳು,** ಇವರಿಗೆ ಶಿಶು ಸಂತಾನವಾಯಿತು. **ಶ್ರೀವಿಷ್ಣು** ಈ ಸಮಯವನ್ನು ಸದುಪಯೋಗ ಪಡಿಸಿಕೊಳ್ಳಲು ಆ ಮಗುವಿನ ಸ್ಥಾನದಲ್ಲಿ ತಾನು ಮಗುವಾಗಿ ಪ್ರಕಟನಾದನು. ಈತನೇ **ಬುದ್ಧ** ರೂಪಿ ಪರಮಾತ್ಮನು, ತನ್ನ ಅದ್ಭುತ ಶಿಶುಮಾತಿನಿಂದ ಎಲ್ಲರನ್ನು ಆಕರ್ಷಿಸಿ **ಪ್ರಶಾಂತ ವಿದ್ಯೆ**ಯನ್ನು ಉಪದೇಶಿಸಿದನು.

ಇದರಿಂದ ಅಸುರರೆಲ್ಲರು ವೇದ ಅಪ್ರಾಮಾಣ್ಯವೆಂದು ಜಗತ್ತಿನಲ್ಲಿ ಪ್ರತಿಪಾದಿಸಿದರು. ಇಂತಹ ಮತವು ಬೌದ್ಧಮತವಾಯಿತು.

**ಶ್ರೀ ಶ್ರೀಕೇಶವನಿಧಿತೀರ್ಥರು**

**ವಾದಿರಾಜರು ಹೇಳಿದ ಕಥೆಗಳು**

## ಶಿಷ್ಟರಕ್ಷಕ-ದುಷ್ಟಶಿಕ್ಷಕ

**ಅರಸಿನ ಆಳೆಂದು ಬಾಳುವ ಮನುಜರ**
**ಸ್ಥಿರತರಭಾಗ್ಯವ ನೀವೆಲ್ಲ ನೋಡಿರೋ**
**ಅರಸು ತಾನೆಂಬವಗೆ**
**ತೆರತೆರದಿ ಬಾಹ ಕ್ಲೇಶರಾಶಿಗಳು**
**ಸೆರೆಮನೆಯಲಿಕ್ಕೆಂಬ**
**ಹರಿ ತಾನೆ ಯೆನ್ನಲು ಪೌಂಡ್ರಕದನುಜನ**
**ಶಿರವ ಚಂಡಾಡಿದನು**

**- ಶ್ರೀಹರಿದಾಸ ಭಾರತೀ ಗ್ರಂಥರತ್ನಮಾಲೆ (ಪುಟ 51)**

ವಾದಿರಾಜರು ಹರಿಯ ಪ್ರೀತಿಯನ್ನು ಸಂಪಾದಿಸಬೇಕೆಂದು ತಿಳಿಸುತ್ತಾರೆ. ಹರಿಯನ್ನು ದ್ವೇಷಿಸುವವರು ಶಿಕ್ಷೆಗೆ ಒಳಗಾಗುತ್ತಾರೆಂಬ ವಿಷಯವನ್ನು ಒಂದು ಕಥಾರೂಪವಾಗಿ ತಿಳಿಸುತ್ತಾರೆ.

ದ್ವಾರಕಾಪುರವಾಸಿಗಳು ಕೃಷ್ಣನನ್ನು ಆಶ್ರಯಿಸಿದ್ದರಿಂದ ಅವರ ರಕ್ಷಣೆಯನ್ನು ಶ್ರೀಕೃಷ್ಣನು ಹೊತ್ತಿದ್ದನು. ಕೃಷ್ಣನ ಮೇಲೆ ಜರಾಸಂಧನು ಪದೇ ಪದೇ ದಂಡೆತ್ತಿ ಹೋಗುತ್ತಾನೆ. ಕೃಷ್ಣನು ಜರಾಸಂಧನ ಕಾಟವನ್ನು ತಡೆಯಲು ವಿಶ್ವಕರ್ಮನಿಂದ ಸಮುದ್ರ ಮಧ್ಯದಲ್ಲಿ ದ್ವಾರಕೆಯನ್ನು ನಿರ್ಮಿಸುತ್ತಾನೆ.

ಹರಿಯನ್ನು ನಂಬದೇ ದ್ವೇಷಿಸುವವರನ್ನು ಸದೆ ಬಡೆಯುತ್ತಾನೆ. ವೇದಗಳನ್ನು ಮಧು ಕೈಟಭ ರಾಕ್ಷಸರು ಅಪಹರಿಸಿ ಹಾನಿಯುಂಟು ಮಾಡುತ್ತಾರೆ. ಇದನ್ನು ಅರಿತ ವಿಷ್ಣುವು **ಹಯಗ್ರೀವ** ರೂಪವನ್ನು ಧರಿಸುತ್ತಾನೆ. ರಸಾತಳದಲ್ಲಿ ಅಡಗಿದ್ದ ಮಧುಕೈಟಭರನ್ನು ಸಂಹರಿಸಿ ಬ್ರಹ್ಮದೇವರನ್ನು ಅನುಗ್ರಹಿಸುತ್ತಾನೆ. ಶ್ರೀಹರಿಯು ಅಯೋಗ್ಯರನ್ನು ಶಿಕ್ಷಿಸಿ, ಯೋಗ್ಯರನ್ನು ರಕ್ಷಿಸುತ್ತಾನೆ ಎಂಬುದು ಈ ಸಾಲುಗಳಲ್ಲಿ ರಾಜರು ನಿದರ್ಶನದೊಂದಿಗೆ ನೀಡಿದ್ದಾರೆ.

**ಶ್ರೀ ಶ್ರೀಕೇಶವನಿಧಿತೀರ್ಥರು**



**ಶ್ರೀಮಠದ**

**ಒಂದು ವರದಿ**

## ಶ್ರೀಕೇಶವನಿಧಿತೀರ್ಥ ಶ್ರೀಪಾದಂಗಳವರ ವಿಜಯೋತ್ಸವ

ಶ್ರೀ 108 ಶ್ರೀ ಕೇಶವನಿಧಿತೀರ್ಥ ಶ್ರೀಪಾದಂಗಳವರು, ಶ್ರೀ ಶ್ರೀಪಾದರಾಜ ವಿದ್ಯಾಸಿಂಹಾಸನವನ್ನು ಅಲಂಕರಿಸಿ ನಡೆಸಿದ ಒಂದು ವರ್ಷದ ಧಾರ್ಮಿಕ ಕಾರ್ಯಕ್ರಮಗಳ ಬಗ್ಗೆ ವರದಿಯನ್ನು **ರಂಗವಿಠಲ** ನೀಡಲು ಬಯಸುತ್ತದೆ.

**ಶ್ರೀ 108 ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು** ತಮ್ಮ ಗುರುಗಳಾದ **ಶ್ರೀ 108 ಶ್ರೀ ವಿಜಯನಿಧಿತೀರ್ಥ ಶ್ರೀಪಾದಂಗಳವರ ಮಹಾಸಮಾರಾಧನೆಯ** ಸಂದರ್ಭದಲ್ಲಿ ಶ್ರೀಮಠದ ಸಂಸ್ಥಾನಪೂಜೆಯನ್ನು ತಮ್ಮ ವರಕುಮಾರರಾದ **ಶ್ರೀಕೇಶವನಿಧಿತೀರ್ಥ ಶ್ರೀಪಾದಂಗಳವರಿಗೆ** ಒಪ್ಪಿಸಿದರು. ಶ್ರೀಕೇಶವನಿಧಿತೀರ್ಥರು ಆರಾಧನಾ 3 ದಿವಸಗಳೂ ಸಂಸ್ಥಾನ ಪೂಜೆಯನ್ನು ಮಾಡಿ ತಮ್ಮ ಗುರುಗಳಿಂದ ಕೂಡಿ ಆರಾಧನೆಯನ್ನು ಅತಿವಿಜೃಂಭಣೆಯಿಂದ ನೆರವೇರಿಸಿದರು.

ಮುಳಬಾಗಿಲಿನ ಅಶೇಷ ಭಕ್ತ ಸಮೂಹವು 15-3-09ರಂದು ಅತ್ಯಂತ ಉತ್ಸಾಹ, ಭಕ್ತಿ, ಗೌರವ ಪುರಸ್ಸರವಾಗಿ ಪೌರಸತ್ಕಾರವನ್ನು ಉಭಯ ಶ್ರೀಗಳವರಿಗೂ, ಸಂಜೆ ಮೆರವಣಿಗೆಯೊಂದಿಗೆ ನೆರವೇರಿಸಿದ ದೃಶ್ಯ, ಕಿಕ್ಕಿರಿದ ಜನ ಸಂದಣಿ ಅತ್ಯಂತ ರಮಣೀಯವಾಗಿತ್ತು.

**ಶ್ರೀಮಠದ ಸತ್ಸಂಪ್ರದಾಯದಂತೆ ಮೊದಲ ಬಾರಿಗೆ, ಚಾತುರ್ಮಾಸ್ಯವನ್ನು ಆಶ್ರಮವಾದ ಕೂಡಲೇ ಕೈಗೊಂಡರು.** 18-3-09ರಂದು **ಶ್ರೀ ಉದ್ದಂಡರಾಮಚಂದ್ರತೀರ್ಥರ ಆರಾಧನೆಯನ್ನು** ಪೆನುಗೊಂಡೆಯಲ್ಲಿ ನೆರವೇರಿಸಿದರು.

ತಮಿಳುನಾಡಿನ ಈರೋಡಿನಲ್ಲಿ **ಶ್ರೀಸುಧೀನಿಧಿತೀರ್ಥರ** (ಪಳ್ಳಿಪಾಳ್ಯ) ಆರಾಧನೆಯನ್ನು ಕೈಗೊಂಡರು. ಈ ಸಂದರ್ಭದಲ್ಲಿ, ಈರೋಡಿನ ಪುರಜನರು ನೀಡಿದ ಅತ್ಯಂತ ಭವ್ಯ ಸ್ವಾಗತದೊಂದಿಗೆ **ಪುರಪ್ರವೇಶ** ಮಾಡಿದರು.

ಚಾತುರ್ಮಾಸ್ಯ ಸೀಮೋಲ್ಲಂಘನ ಕಾರ್ಯಕ್ರಮದ ಅಂಗವಾಗಿ ಬೆಂಗಳೂರಿನ ಚಾಮರಾಜಪೇಟೆ, ರಾಘವೇಂದ್ರಕಾಲೋನಿಯ ಭಕ್ತವೃಂದದವರ ಪ್ರಾರ್ಥನೆಯನ್ನು ಮನ್ನಿಸಿ, **ಗುರುವಂದನಾ ಕಾರ್ಯಕ್ರಮ**ದಲ್ಲಿ ಭಾಗವಹಿಸಿದರು. ಕಿರಿಯ ಶ್ರೀಪಾದಂಗಳವರು ನಡೆಸಿದ ಶ್ರೀಮಠದ ಪ್ರಥಮ ಅಭಿವೃದ್ಧಿಕಾರ್ಯವೆಂದರೆ ರಾಘವೇಂದ್ರಸ್ವಾಮಿಗಳ ಬೃಂದಾವನ ಸನ್ನಿಧಿಯನ್ನು ನವೀಕರಿಸಿರುವುದು.

**ಕೀರ್ತನ**

**ಚಿಂತನ**

ಮುಂದುವರಿದ ಭಾಗ

# ಶ್ರೀಪಾದರಾಜರ ಕೀರ್ತನ ಚಿಂತನ

**ಕುಂಡಲಿಯ ನಗರವಂತೆ ಭೀಷ್ಮಕರಾಯನ ಕುವರಿಯಂತೆ**
**ಶಿಶುಪಾಲನ ಒಲ್ಲಳಂತೆ ನಿನಗೆ ಓಲೆ ಬರೆದಳಂತೆ**

ಶ್ರೀಪಾದರಾಜರು ರಂಗನೊಂದಿಗೆ ಪೋಪು ಹೋಗುತ್ತಾ ತ್ರೇತಾಯುಗದಿಂದ ದ್ವಾಪರಯುಗಕ್ಕೆ ನಮ್ಮನ್ನು ಕೊಂಡೊಯ್ಯುತ್ತಾರೆ.ಕುಂಡಲಿಯ ನಗರದಲ್ಲಿ ಭೀಷ್ಮಕರಾಜನ ಮಗಳಾದ ರುಕ್ಮಿಣೀ ಕಲ್ಯಾಣಕ್ಕೆ ಹೋಗುವ ಸಂಭ್ರಮ ಶ್ರೀಪಾದರಾಜರದ್ದು. ಒಬ್ಬ ಬ್ರಾಹ್ಮಣನ ಮೂಲಕ ಪ್ರೇಮ ಪತ್ರದ ಸಂದೇಶವನ್ನು ರುಕ್ಮಿಣೀದೇವಿಯು ಕೃಷ್ಣನಿಗೆ ಕಳುಹಿಸಿದ ವೃತ್ತಾಂತವನ್ನು ಮುಂದೆ ಆ ಬ್ರಾಹ್ಮಣನೇ ವಾದಿರಾಜರಾಗಿ **ರುಕ್ಮಿಣೀಶ ವಿಜಯ** ಕಾವ್ಯವನ್ನು ರಚಿಸುತ್ತಾರೋ ಎಂದು ತಿಳಿಸುವಂತೆ ತೋರುತ್ತದೆ.

ದೈತ್ಯ ಶಿಶುಪಾಲನಿಗೆ ಕೊಟ್ಟು ವಿವಾಹ ಮಾಡುವುದಾಗಿ ಸಹೋದರನಾದ ರುಗ್ಮಿಯು ತಿಳಿಸುತ್ತಾನೆ. ರುಕ್ಮಿಣಿದೇವಿಯು ಶ್ರೀಕೃಷ್ಣನಿಗೆ ಸಂದೇಶವನ್ನು ಕಳುಹಿಸುತ್ತಾಳೆ. ಶಿವ-ಪಾರ್ವತಿ ಮಂದಿರಕ್ಕೆ ಹೊರಡುವ ನೆಪದಲ್ಲಿ ಶ್ರೀಕೃಷ್ಣನೊಂದಿಗೆ ಕೂಡಿಕೊಂಡು ವಿವಾಹವಾಗುತ್ತಾಳೆ.

**ಪೋಪು ಹೋಗೋಣ ಬಾರೋ ರಂಗ** ಎಂಬ ಶ್ರೀಪಾದರಾಜರ ಕೀರ್ತನೆಯ ಈ ನುಡಿಯ ಸಾರ ಸರ್ವಸ್ವವನ್ನು **ಶ್ರೀರುಕ್ಮಿಣೀಶ ವಿಜಯ** ಮಹಾಕಾವ್ಯದಲ್ಲಿ ಶ್ರೀವಾದಿರಾಜರು ಪ್ರತಿಬಿಂಬಿಸಿದ್ದಾರೆ ಎಂಬಂತೆ ತೋರುತ್ತದೆ. ಈ ನುಡಿಯು ಶ್ರೀವಾದಿರಾಜರ ಆರಾಧನಾ ಸಂದರ್ಭದಲ್ಲಿ ಬಂದಿರುವುದು ದ್ವಾರಕಾ ನಗರಿಗೆ ಪ್ರಯಾಣ ಮಾಡಿದಷ್ಟೆ ಸಂತಸವನ್ನು ಕೊಡುತ್ತದೆ.

ರಂಗನೊಂದಿಗೆ ಸಖ್ಯ ಭಕ್ತಿಯನ್ನು ಅನಾವರಣಗೊಳಿಸಿ ದಾಸಶಾಸ್ತ್ರಚತುರರಾಗಿ ಇಂತಹ ಅಪೂರ್ವ ಕೃತಿಯಿಂದ ನಮ್ಮನ್ನು ಮಹಾಭಾರತ ದರ್ಶನದಲ್ಲಿ ಮುಳುಗಿಸಿದ ಶ್ರೀಪಾದರಾಜರಿಗೆ ನಮಿಸುವ ಬನ್ನಿ. ರಂಗನೊಂದಿಗೆ ಮುಂದೆ ಪೋಪು ಹೋಗುವದಾದರೂ ಎಲ್ಲಿಗೆ? ರಾಜರು ತೋರಿದ ಬಿಂಬೋಪಾಸನೆಯ ನಗರವಾದರೂ ಯಾವುದು?

(ಪೋಪು.... ಮುಂದುವರೆಯುತ್ತದೆ.)

**ಲೇಖಕ: ಹೆಬ್ಬಣಿ ಜಿ. ರಾಮಚಂದ್ರ**
**ಕಪಿಲ ಪರಮಾತ್ಮ ಮಕ್ಕಳ ಭಜನಾ ಮಂಡಳಿ, ನಂ.16, 1ನೇ ಅಡ್ಡರಸ್ತೆ, ರಾಮರಾವ್ ಬಡಾವಣೆ, ಬೆಂಗಳೂರು**



**ಶ್ರೀ ವಾದಿರಾಜರ ಗುಂಡಕ್ರಿಯೆಯ**

**ಒಂದು ಅಧ್ಯಯನ**

# ವಿಕೃತಿ ಸಂವತ್ಸರದ ಯುಗಾದಿ ಶುಭಾಶಯ

ವಿಕೃತಿ ಸಂವತ್ಸರವು ನಿರಂತರ।
ಸುಕೃತ ಫಲಗಳ ನೀಡುತಲಿರಲಿ ॥ ಪ॥

ಪ್ರಕೃತಿ ದೇವಿಯ ಸುಂದರ ಸುಮಧುರ।
ಆ ಕೃತಿಗಳು ಉತ್ಕೃಷ್ಟವೆನಿಸಲಿ ॥ ಅ.ಪ॥

ಪ್ರಕೃತ ನೋವು ಕಷ್ಟಗಳಳಿದು।
ಸ್ವೀಕೃತವಾಗಲಿ ಹರುಷ ಆನಂದ।
ಅಕೃತ್ಯ ದುಷ್ಕೃತ್ಯವೆಲ್ಲ ತೊರೆದು।
ಸುಕೃತ್ಯ ನಡೆಯುತಲಿರಲಿ ಸದಾ ॥ 1॥

ಚೈತ್ರ ಸಂಭ್ರಮದ ಮೊದಲದಿನ।
ಮಿತ್ರರಾಗಲಿ ಸಕಲ ಸಜ್ಜನ।
ಮೈತ್ರಿಭಾವನೆ ಬೆಳೆಯಲಿ ದಿನ ದಿನ।
ಸೂತ್ರ ಒಂದರಿಂಬೆಸೆಯಲಿ ಮನ ಮನ ॥ 2॥

ಸುಖ ದುಃಖ ಸಿಹಿ ಕಹಿ ಬೇವು ಬೆಲ್ಲ।
ಆ ಖರಾರಿಗರ್ಪಿತ ದ್ವಂದ್ವಗಳೆಲ್ಲ।
ಸಖ ಮಂಗಳಾಂಗ ಹರಿ ವಿಟ್ಠಲ।
ನಿಖಿರ ಜ್ಞಾನಭಕ್ತಿ ಇತ್ತು ರಕ್ಷಿಸಲಿ ॥ 3॥

**ಲೇಖಕಿ: ಡಾ॥ ಎನ್.ಜಿ. ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯ**
**ನಂ. 333, 13ನೇ ಮುಖ್ಯರಸ್ತೆ ಗೋಕುಲಬಡಾವಣೆ, ಬೆಂಗಳೂರು-54**

**ಶ್ರೀ ವಾದಿರಾಜರ ಗುಂಡಕ್ರಿಯೆಯ**

**ಒಂದು ಅಧ್ಯಯನ**

## ಗುಂಡಕ್ರಿಯೆಯ ಗಾಂಭೀರ್ಯ

ಶ್ರೀ ವಾದಿರಾಜ ಗುರುಸಾರ್ವಭೌಮರು ತತ್ವವಿಷಯಗಳನ್ನು ತಿಳಿಸುವಲ್ಲಿ ಶೂರರು. **ಗುರ್ವರ್ಥದೀಪಿಕಾ, ಭಾವಪ್ರಕಾಶಿಕೆ** ಮುಂತಾದ ವಾಖ್ಯಾನ ಗ್ರಂಥಗಳು ಹಾಗೂ **ಯುಕ್ತಿಮಲ್ಲಿಕೆ**ಯೆಂಬ ಸಂಸ್ಕೃತಗ್ರಂಥಗಳನ್ನು ರಚಿಸಿದ್ದಾರೆ.

ಶ್ರೀ ಶ್ರೀಪಾದರಾಜರು, ವ್ಯಾಸರಾಜರುಗಳಿಗಿಂತ ವಿಭಿನ್ನವಾಗಿ ಕನ್ನಡದಲ್ಲಿ ದಾಸಸಾಹಿತ್ಯದ ಮೂಲಕ ತತ್ವವಿಷಯಗಳನ್ನು ತಿಳಿಸುವ **ವೈಕುಂಠ ವರ್ಣನೆ ಗುಂಡಕ್ರಿಯೆ** ಮೊದಲಾದ ಸರಳ ಗ್ರಂಥಗಳನ್ನು ಸದ್ಭಕ್ತರಿಗೆ ನೀಡಿದ್ದಾರೆ. ಲೋಕಾನುಭವವನ್ನು ಹೆಚ್ಚಾಗಿ-ಮಿಶ್ರಣಮಾಡಿ ತದುಕ್ತಿಯಿಂದ ಕೂಡಿದ ರಹಸ್ಯ ಜ್ಞಾನವನ್ನು ಪಂಡಿತ ಪಾಮರರಿಗೆ ಉಂಟುಮಾಡಲು **ಗುಂಡಕ್ರಿಯೆ**ಯು ಒಂದು ಉತ್ತಮ ಕೈಪಿಡಿಯಾಗಿದೆ.

ಬ್ರಹ್ಮಸೂತ್ರ ಎರಡನೇಯ ಅಧ್ಯಾಯದ ಎರಡನೇ ಪಾದವಾದ **ಸಮಯಪಾದ**ವನ್ನು ಪಾಮರರಿಗೆ ತಿಳಿಸಲಿಕ್ಕಾಗಿ ಅರ್ಥ ಗರ್ಭಿತವಾಗಿ ಹೇಳಿದ್ದಾರೆ.

ಶ್ರೀವಾದಿರಾಜತೀರ್ಥರು **ಸುಧಾಯಾಃ ಶ್ರೀಕರತ್ವೇ ವಯಮೇವ ಸಾಕ್ಷಿಣಃ**- ಎಂದು ಮುಕ್ತಕಂಠದಿಂದ ಸ್ತುತಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

**ಗುಂಡಕ್ರಿಯೆಯು, ಸುಧಾ ಗ್ರಂಥ**ದ ಅನುವಾದವೆಂದರೆ ತಪ್ಪಾಗಲಾರದು. ರಾಜರು ತಮ್ಮ ಪ್ರೌಢಶೈಲಿಯಿಂದ ಆಧ್ಯಾತ್ಮಿಕ ಸಮಸ್ಯೆಗಳನ್ನು ಬಿಡಿಸಿ ಜ್ಞಾನಾಮೃತ ರಸಧಾರೆಯನ್ನು ಹರಿಸಿ ಗುಂಡಕ್ರಿಯೆಯ ಮೂಲಕ ಪಾಮರರಿಗೆ ಪಾನ ಮಾಡಿಸಿದ್ದಾರೆ. ಈ ಗ್ರಂಥದಲ್ಲಿ ಎಲ್ಲಾ ಪ್ರಮಾಣಗಳು ಸುಲಭವಾಗಿ ಆಕರ್ಷಕವಾಗಿ ಹರಿದಿದೆ. ಗುಂಡಕ್ರಿಯೆಯೆಂಬ ಪದವೇ ತಿಳಿಸುವಂತೆ ದುರ್ಮತಗಳನ್ನು ಕುಟ್ಟಿ ಪುಡಿ ಮಾಡುತ್ತದೆ.

ಈ ಗ್ರಂಥವನ್ನು ಅಭ್ಯಾಸ ಮಾಡಿ, ಮನನ ಮಾಡಿ, ಸುಧಾದಿ ಗ್ರಂಥಗಳನ್ನು ಅಧ್ಯಯನ ಮಾಡಿದಲ್ಲಿ ಮಾತ್ರ ಸುಲಭವಾಗಿ ಅರ್ಥೈಸಿಕೊಳ್ಳಬಹುದು.

**ಲೇಖಕ: ಡಾ|| ಅರಳುಮಲ್ಲಿಗೆ ಪಾರ್ಥಸಾರಥಿ**
**ದಾಸಸಾಹಿತ್ಯ ಸಂಶೋಧಕರು 1120, 7ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು-85**

**ಕೀರ್ತನ**

**ಚಿಂತನ**

**Part III Popu Hogona BAro.... Contin**

## SRIPADARAJA KRUTHI

### A DEVOTEE'S PERSPECTIVE

**jAhnavIya teeravante janakarAyana kuvariyante**
**jAnikIya vivAhavante jANa neenu barabEkante**

Sripadarajaru's literary dexterity can be seen. He begins every line in the first charanam with JA and continues with a different recount.

Dasaru says,

" It is the bank of the river JAhnavi, there lives Janaka's daughter, it is janaki's wedding, be a sport and come along, they are waiting for You special presence."

**kunDilIya nagaravante bheeShamakana kuvariyante**
**shishupAlana vollaLante ninage vAle baredalante**

Next Dasaru is recalling the entire Rukmini kalyana which appears in the Mahabharata in detail. In this incident also the Lord shows that He will never desert anyone who is seeking shelter at His feet. Sri Vadirajaru has devoted an entire work to this incident of the Mahabharata called the "RukminIsha vijaya".

Rukmini's letter to Krishna sent through a brahmin is a wonderful sarva samarpana on her part seeking the Lord's grace. She also gives the Lord hints about how the escapade can be organised. The letter contains a wonderful description of the Lord. She says," O beautiful Lord, the personification of beauty, O Flawless one, endowed with infinite auspicecous attributes, I have heard about Your great prowess, Your special attributes and seek to be Your consort and only Yours. O Lord , hearing Your nectarian glories removes the distress and suffering of life. I have heard much about Your soveriegn glory from the sadhus and sajjanas visiting my father's palace and have decided to offer myself to You. Please accept me as Your wife, O Lion among men. Please don't forsake me. I refuse to consider any other possibility, so please see that You are here to take me with You on time."

(To be continued)

Author : **Smt. Parimala Raghavendra**
Singapore
raviparioI@yahoo.com

## ಕಾಠಿಣ್ಯದ ಮನಸ್ಸನ್ನು ಮೃದುಗೊಳಿಸುವ ರಾಗ

**ಭವದ್ಭಿಸ್ತು ಸುಸಂಗೀತಂ ಮಾಂ ಚ ಶೃಂಗಾರ ರೂಪಿಣಂ।**
**ಶೃತ್ವಾ ಗಾ ನಮ್ಮ ಅಪಿ ಸರ್ವೇಽಪಿ ನಿಸ್ಸಂಗಾಯಾಂತು ಮದ್ಗತಿಂ॥**

ಸಾಮಗಾನ ಪ್ರಿಯನಾದ ಹಯವದನರೂಪಿ ಪರಮಾತ್ಮ, ಅನಾದಿಯಾದ ನಿರ್ದುಷ್ಟನಾದ ದೋಷದೂರನಾದ, ಸರ್ವಜ್ಞನಾದ ದೇವನ ಉಪದೇಶವು ಸರ್ವಸಮ್ಮತವೆಂದು ಜ್ಞಾನಸಮ್ಮತವೆಂದೂ, ನಿತ್ಯವಾದ ವೇದಗಳಿಗೆ ಶರಣು ಹೋಗುವುದು ಉಚಿತ, ಸರ್ವಜ್ಞತ್ವ ಶ್ರೀಹರಿಗಲ್ಲದೆ ಬೇರಾರಿಗೂ ಇಲ್ಲ ಎಂಬುದನ್ನು ವೇದೋಕ್ತ ಪೌರಾಣಿಕ ದೃಷ್ಟಾಂತಗಳನ್ನೊಳಗೊಂಡ **ಗುಂಡಕ್ರಿಯಾ** ಗ್ರಂಥವು ತಿಳಿಸುತ್ತದೆ.

ಕಾವ್ಯದಲ್ಲಿ ಬರೆದ ಹಾಗೆ **ಕೈವಲ್ಯ ಬೇಕಾದರೆ ಇವ್ಮನ ಮಾಡದೆ ಹಯವದನನ ಪದ್ಯವನ್ನೇ ಭಜಿಸಿರೋ** ಎಂಬ ಗ್ರಂಥದ ಸಾರವನ್ನು **ವ್ಯಾಖ್ಯಾನ ಮಾಡುವವಗೆ ಕೊಡುವುದು ಕಾಣೋ ಅನುಪಮ ಶಕುತಿ** ಎನ್ನುವಂತೆ ಇದೆ.

ತ್ರಿವಿಧ ಜೀವ ವರ್ಗಾಪವರ್ಗಕ್ಕೆ ಸ್ವರ್ಗವೇ ಸಾಕ್ಷಿ,

**ಶ್ರೀ ವಿಷ್ಣು ವಿಶ್ವಾದಿ ಮೂಲ ಮಾಯಾಲೋಲ**
**ದೇವ ಸರ್ವೇಶ ಪರಬೊಮ್ಮಸೆರಿದು ಜನಂ**
**ಅವುದನು ಕಾಣದಮಶ್ರಿಯಿಂ ನಾದಿಹುದೋ**
**ಆ ವಿಡಿತ್ತಕೆ ನಮಿಸೋ ಮಂಕುತಿಮ್ಮ**

**-ಡಿ.ವಿ.ಜಿ. ಮಂಕುತಿಮ್ಮನ ಕಗ್ಗ**

ವಿಷ್ಣುವೇ ಆದಿಮೂಲ ಎಂದು ಎಂದ ಮೇಲೆ ಅವನ ಮಕ್ಕಳು ನಾವು ಅವನ ಆಶ್ರಯದಲ್ಲಿ ಬದುಕುತ್ತಿರುವವರು ಅಂತಹ ನಂಬಿದಂತಹ ನಮಗೆಲ್ಲ ವರ ಕೊಡುವ ದಯಾನಿಧಿ ಹಯವದನನು. ಪಾದ ಸರೋಜವನ್ನೇ ಬುವಿಯಲ್ಲಿ ಸಾರಿದ ಕೀರ್ತಿ ವಾದಿರಾಜರಿಗೆ ಸಲ್ಲುವುದು. ಕಲ್ಲಾದ ಮನಸ್ಸಿಗೆ ಸುಖದೋರುವ **ಗುಂಡಕ್ರಿಯೆ** ಗ್ರಂಥ ಎಲ್ಲ ಯೋಗ್ಯತಿಯುಂಟು ಅಲ್ಲಿಯೇ ಫಲ ಆದಿಲ್ಲದವರಿಗೆಲ್ಲ ಬಲ್ಲ ಬುಧರು ಕೇಳಿರೋ ಎನುವುದು ವಾದಿರಾಜರಿಗೆ ಭಾವೀ ಸಮೀರರೆನ್ನುವುದರಲ್ಲಿ ಸಂದೇಹವಿಲ್ಲ.

**ಲೇಖಕ: ರಾಮಚಂದ್ರಾಚಾರ್ಯ ಅ.ಗೋಗಿ**
**ಧೀರೇಂದ್ರತೀರ್ಥರ ಮಠ, ಹೊಸರಿತ್ತಿ, ಹಾವೇರಿ ಜಿಲ್ಲೆ**
**ಲೇಖಕ : ಗುರುರಾಜ ಕುಲಕರ್ಣಿ (ಮುರನಾಳ)**
**ಶ್ರೀಚಂದ್ರಲಾನಿವಾಸ, 11, ಮಹಾತ್ಮಗಾಂಧಿ ರಸ್ತೆ, ವಿದ್ಯಾಗಿರಿ, ಬಾಗಲಕೋಟೆ.**





## ಗುಂಡಕ್ರಿಯೆಯ ಜನಪ್ರಿಯತೆ

**ಗುಂಡಕ್ರಿಯೆ** ಎಂಬುದು ತತ್ತ್ವ ಪದಗಳಿಗೆ ಉಪಯೋಗಿಸಲ್ಪಟ್ಟ ವೃತ್ತ. ವಾದಿರಾಜತೀರ್ಥರು ತತ್ತ್ವಪದಗಳನ್ನು ಈ ವೃತ್ತದಲ್ಲಿ ಬರೆದಿದ್ದರಿಂದ ಆ ಕೃತಿಗೆ ಗುಂಡ ಕ್ರಿಯೆ ಎಂಬ ಹೆಸರು ಬಂದಿತೆಂದು ಹೇಳುವುದುಂಟು. **ಗುಂಡ** ಎಂಬುದಕ್ಕೆ **ಪುಡಿಮಾಡು** ಎಂಬರ್ಥವಿರುವುದರಿಂದ. ಯುಕ್ತಿಪೂರ್ವಕ ಇತರ ವಾದಿಗಳನ್ನು ನಿರುತ್ತರ ರನ್ನಾಗಿಸುವುದು ಎಂದು ಅರ್ಥೈಸುವುದು ಹೆಚ್ಚು ಸೂಕ್ತವೆನಿಸುತ್ತದೆ. ವಾದಿರಾಜರು ಗುಂಡಕ್ರಿಯೆ ಎಂಬ ರಚನೆಯೊಂದರಲ್ಲಿ ಚಾರ್ವಾಕ, ಜೈನ, ಬೌದ್ಧಮತಗಳನ್ನು ಸೂಚ್ಯವಾಗಿಯೂ, ಅದ್ವೈತಮತವನ್ನು ವಿವರವಾಗಿಯೂ ಖಂಡಿಸಿ ಕಡೆಗೆ ತತ್ತ್ವವಾದದ ಹಿರಿಮೆಯನ್ನು ತೋರಿಸಿ ಕೊಡುವರು. ಉದಾಹರಣೆಗಾಗಿ : ಮಾನವರೆಲ್ಲರು ಮರುಳರು, ನಾನೇ ಪ್ರವೀಣನೆಂದರೆ ನಗರೆ, **ಆನೆಂಬಹಂಕೃತಿಯಿಂದ ಜಗದೊಳು ನೀನೆ ಹೀನನಾಹೆ** ಎಂದು ದಾರ್ಶನಿಕರ ನಿಲುವನ್ನೇ ಖಂಡಿಸಿ ಎಚ್ಚರಿಸಿರುವರು.

ವಿವೇಕಿಗಳೆಲ್ಲ ಕೇಳಿ ಈ **ಕುಮತಿಗಳಚ್ಚುತ್ತೋಹಂ, ಶಿವೋಹಂ** ಎಂದೇಕೆ ಪೇಳುವರಯ್ಯ. ಎಂದೂ ಆ ರಾಮಾದ್ಯವತಾರದಲ್ಲಿ ಮುರಿದ ಬಿಲ್ಲು ಆ ಮಹೇಶನದಲ್ಲವೆ ಎಂದು ಹರಿಸರ್ವೋತ್ತಮತ್ವವನ್ನು ತೋರಿಸಿದ್ದಾರೆ.

ದಿಟ್ಟವಾದ, ಸ್ಫುಟವಾದ ತಾತ್ವಿಕ ನಿರೂಪಣೆಗಾಗಿ ಲಯಬದ್ಧವಾದ ಗದ್ಯದಂತೆ ಈ ವಿಚಾರಧಾರೆಯ ಹೊಸ ತಿರುವನ್ನು ನೀಡಿದ ವಾದಿರಾಜರು ಅದಕ್ಕಾಗಿಯೇ ನಿರ್ಮಿಸಿದ ಹೊಸಬಂಧ ಇದಾಗಿರುವಂತಿದೆ. ಮುಂದಿನ ಹರಿದಾಸರಲ್ಲಿ ಈ ಪ್ರಯೋಗ ಅಷ್ಟಾಗಿ ಕಾಣಿಸದು. ಇದೇ ಬಗೆಯ ತಾತ್ವಿಕ ಚಿಂತನೆಗಳಿದ್ದರೂ ಇವು ಕೀರ್ತನೆಗಳ ಮುಖಾಂತರವಾಗಿಯೇ ಅಭಿವ್ಯಕ್ತವಾಗಿದ್ದುಂಟು.

ಹೀಗೆ ಹರಿದಾಸ ಸಾಹಿತ್ಯವು ವಿಶೇಷವಾಗಿ ಕೀರ್ತನೆಗಳು, ಸುಳಾದಿಗಳು ಉಗಾಭೋಗಗಳು ಅನಂತರ ಕ್ರಮವಾಗಿ ವೃತ್ತನಾಮ, ದಂಡಕ ಹಾಗೂ ಗುಂಡ ಕ್ರಿಯೆಗಳೆಂಬ ಪ್ರಕಾರಗಳಲ್ಲೂ ರಚನೆಯಾಗಿದೆ. ಆದರೂ ಪದ ಅಥವಾ ಕೀರ್ತನೆ ಪ್ರಕಾರ ಮಾತ್ರ ಅಂದಿನಿಂದ ಇಂದಿನವರೆಗೂ ತನ್ನ ಅಸ್ತಿತ್ವವನ್ನೂ ಜನಪ್ರಿಯತೆಯನ್ನೂ ಉಳಿಸಿಕೊಂಡು ಬಂದಿದೆ.

**(ಗ್ರಂಥ ಋಣ ಶ್ರೀ ಪ್ರಾಣೇಶದಾಸರು ಒಂದು ಅಧ್ಯಯನ ಪುಟ 62)**

**ಲೇಖಕಿ: ಡಾ॥ ಸುಮನ ಯಜುರ್ವೇದಿ**
**ಕನ್ನಡ ಪ್ರಾಧ್ಯಾಪಕರು, ನೂತನ ವಿದ್ಯಾಲಯ, ಪದವಿ ಮಹಾವಿದ್ಯಾಲಯ, ಗುಲಬರ್ಗಾ**

## ಕಲ್ಲನ್ನು ಮೃದುವಾಗಿಸಬಲ್ಲ ಕೃತಿ

ಗುಂಡಕ್ರಿಯೆಯೆಂಬುದು ರಾಗಸೂಚಕವೆಂಬುದಕ್ಕೆ ಒಂದಾನೊಂದು ಪುರಾಣೋಕ್ತ ಕಥೆಯನ್ನು ಹೇಳುತ್ತಾರೆ. ನಾರದರು ಮತ್ತು ತುಂಬುರರು ಒಮ್ಮೆ ತಮ್ಮ ಸಂಗೀತವಿದ್ವತ್ತೆಯ ಬಗ್ಗೆ ಪರಸ್ಪರ ಸ್ಪರ್ಧಿಸಿ, ಯಾರು ಉತ್ತಮರೆಂಬ ನಿರ್ಣಯವನ್ನು ತಿಳಿಯಲು, ಉಭಯರಿಗೂ ಸಮ್ಮತರಾದ ಶ್ರೀಆಂಜನೇಯನ ಬಳಿಗೆ ಬಂದರಂತೆ. ಕಿಂಪುರುಷ ಖಂಡದಲ್ಲಿ ರಾಮಕಥಾಗಾನದಲ್ಲಿದ್ದ ಶ್ರೀಆಂಜನೇಯನೆದುರಿಗೆ ಕೈಜೋಡಿಸಿನಿಂತು ತಮ್ಮ ವಿವಾದದ ನಿರ್ಣಯವನ್ನು ಕೇಳಿಕೊಂಡರಂತೆ. ಆಗ ಶ್ರೀಆಂಜನೇಯನು ಉಭಯರೂ ಒಂದು ರಾಗವನ್ನು ಆಲಾಪನೆ ಮಾಡಿರೆಂದು ತಿಳಿಸಿ, ತಮ್ಮ ಗಾನವನ್ನು ಮುಂದವರಿಸಿದರಂತೆ.

ನಾರದ ತುಂಬುರರು ಹರ್ಷಗೊಂಡು, ಸಮೀಪದಲ್ಲಿ ಒಂದು ಕಲ್ಲುಬಂಡೆಯ ಮೇಲೆ ಇಟ್ಟಿದ್ದ ವೀಣೆ ಮತ್ತು ತಂಬೂರಿಗಳನ್ನು (ವಾದ್ಯಗಳನ್ನು) ಎತ್ತಿಕೊಳ್ಳುವ ಪ್ರಯತ್ನವು ಸಾಧ್ಯವಾಗಲಿಲ್ಲ. ವಿಷಣ್ಣರಾಗಿ ಶ್ರೀಆಂಜನೇಯನ್ಲಲ್ಲಿ ವಿಜ್ಞಾಪಿಸಿಕೊಂಡರು, ಆಂಜನೇಯನು ಯಾರ ಗಾನದಿಂದ, ವಾದ್ಯಗಳನ್ನು ಎತ್ತಿಕೊಳ್ಳಲು, ಆ ಗುಂಡು ಮೃದುವಾಗಿ ಅವಕಾಶವನ್ನೀಯುತ್ತದೆಯೋ ಅವರೇ ಉತ್ತಮ ವಿದ್ವಾಂಸರು ಎಂದನಂತೆ. ಉಭಯರ ಗಾನವೂ ಸಫಲವಾಗದಿರಲು ಶ್ರೀಆಂಜನೇಯನು ತಾಮ ಗಾನಮಾಡುತ್ತಿದ್ದ ರಾಗವನ್ನು ನಾನಾ ವಿಷಯಗಳಿಂದ ಆಲಾಪನೆ ಮಾಡಿ ಈಗ ನಿಮ್ಮ ನಿಮ್ಮ ಶ್ರುತಿವಾದ್ಯವನ್ನು ತೆಗೆದುಕೊಳ್ಳಿ ಹೋಗಿ ಎಂದನಂತೆ. ಆಗ ನಾರದರ ವೀಣೆ ಮತ್ತು ತುಂಬುರನ ತಂಬೂರಿ ಅವರ ಕೈಗೆ ಬಂದುವಂತೆ. ಸಂಗೀತವಿದ್ಯೆಯು ಅಚ್ಯುತನನ್ನು ಮೆಚ್ಚಿಸಲು ಮಾತ್ರ, ಯಾರ ಗಾನದೊಂದಿಗೆ ಭಕ್ತಿಯು ಅಧಿಕವಾಗಿರುವುದೋ ಅವರೇ ಹೆಚ್ಚಿನ ವಿದ್ವಾಂಸರು ಎಂಬ ನಿರ್ಣಯವನ್ನು ಹೇಳಿ ಶ್ರೀಆಂಜನೇಯನು ಅವರನ್ನು ಬೀಳ್ಕೊಟ್ಟನಂತೆ.

ಉಭಯರೂ ಶ್ರೀಮದಾಂಜನೇಯನೇ ಸಂಗೀತಸರ್ವಜ್ಞನೆಂದು ಘೋಷಿಸುತ್ತ ಜಗತ್ತಿನಲ್ಲಿ ಸಂಚರಿಸಿದರಂತೆ. ಶ್ರೀ ಆಂಜನೇಯನ ಯಾವ ರಾಗದ ಆಲಾಪನೆಯು ಕಲ್ಲುಬಂಡೆಯ (ಗುಂಡಿನ) ಮೃದುತ್ವ ಕಠಿಣತ್ವಗಳನ್ನು ನಿಯಂತ್ರಿಸುವ ಸಾಮರ್ಥ್ಯವುಳ್ಳದ್ದಾಯಿತೋ ಅದು **ಗುಂಡಕ್ರಿಯರಾಗವೆಂದು** ಕರೆಯಲಾಗುತ್ತದಂತೆ.

**ಗ್ರಂಥ ಋಣ: ಗುಂಡಕ್ರಿಯೆ (ವ್ಯಾಖ್ಯಾನದೊಡನೆ) ಪುಟ 7**
**ಲೇಖಕ: ಹರಿದಾಸರತ್ನಂ ಗೋಪಾಲದಾಸರು**
**ಗವಿಪುರಂಗುಟ್ಟಹಳ್ಳಿ ಬೆಂಗಳೂರು-19**





ಪ್ರಳಯಕಾಲದಲ್ಲಿ ಆಲದೆಲೆಯ ಮೇಲೆ ಶ್ರೀದೇವಿಯರೊಡನೆ ಪವಡಿಸಿದವನು ಕೇವಲ ಭಗವಂತ ಮಾತ್ರ. ಉಳಿದ ದೇವತೆಗಳ ಕುರಿತು ಪ್ರಸ್ತಾಪ ಮಾಡಿಲ್ಲ. ಭಗವಂತನ ಸಾರ್ವಭೌಮತ್ವವನ್ನು, ಅವನ ಉತ್ಕೃಷ್ಠತೆಯನ್ನು ಇದು ಪ್ರತಿಪಾದಿಸುತ್ತದೆ. ನಾರಾಯಣನೇ ಅಖಿಲಾಂಡಕೋಟಿ ಬ್ರಹ್ಮಾಂಡಕ್ಕೆ ಸಾರ್ವಭೌಮನೆಂದು ಇಲ್ಲಿ ಗುರುಗಳು ನಿರೂಪಿಸಿದ್ದಾರೆ.

ತಾಯಿ ಮಕ್ಕಳ ತಪ್ಪನ್ನು ಕ್ಷಮಿಸುವಂತೆ, ಕೆಲವೊಮ್ಮೆ ಭಕ್ತ ಸೊಕ್ಕು ತೋರಿದರೂ, ಮಗುವೆಂದು ಸಲಹುವ **ಹಯವದನ.**

**ಕನರಿಸಿ ಯಮಭಟರು ಮುಂದೆ ಕೊಂದರೆ ನಿನ್ನ**
**ಘನತೆಗೆ ಸಾಲದಯ್ಯ ತನ್ನವರ ಹಯವದನನನ್ಯರಿಗೊಪ್ಪಿಸಿದ**
**ನೆನ್ನುವ ದುರ್ವಾರ್ತೆ ತಪ್ಪಿಸಿಕೊ ತಂದೆ ಮುನ್ನಿಜನವಂದ್ಯಪಾದ (38)**

ಹೇಗೆ ಕರೆದರೂ ಬರುವ ಎಂಬ ನುಡಿಗೆ ಕಟ್ಟು ಬಿದ್ದು ಸಲಹುವ ದೇವ. ಬೇಸರದಿ ಕೂಗಿದರೂ ಬ್ಯಾಸರಿಸದೇ ಬರುವ ಕರುಣಾಮಯಿ. ನಮ್ಮ ಭಕ್ತಿ ನಿಜವಾದ ಭಕ್ತಿಯ ಪರಿಭಾಷೆಗೆ ನಿಲುಕದಿದ್ದರೂ, ಹಲವಾರು ಬಾರಿ ಜಗತ್ತು ನಮ್ಮನ್ನು ಆ ಪರಮಾತ್ಮನ ಭಕ್ತರೆಂದು ಗುರುತಿಸುತ್ತದೆ. ಹೀಗಿರುವಾಗ, ಯಮಭಟರು ನಮ್ಮನ್ನು ಕೊಂಡೋಯ್ದರೆ ಭಗವಂತನ ಕೀರ್ತಿಗೆ ಅಪಖ್ಯಾತಿ ಬರುತ್ತದೆಂದು ನಮ್ಮನ್ನು ಮರಣ ಕಾಲದಲ್ಲಿ ಕಾಯಲು ಪ್ರಾರ್ಥಿಸಿದ್ದಾರೆ.

**ಶ್ರೀನಾಥ ಹಯವದನ ಶಿಶುಗಳ ತಪ್ಪನು**
**ಜನನಿ ಜರೆದರೆ ಜಗವೆಲ್ಲ ನಗುವುದೋ ಜಾಣರ ಜಾಣರ ನೀನು**

ದೇವರನ್ನು ಒಲಿಸುತ್ತ, ಮುದ್ದಿಸುತ್ತ ಅವನನ್ನು ತಮ್ಮ ಮುಗ್ಧತೆಯಿಂದ ಬಂಧಿಸುತ್ತ ಶ್ರೀ ಗುರು ವಾದಿರಾಜರು ಹೇಳುವ ಈ ಪರಿ ಕೇವಲ ಅವರಿಂದಲೇ ಸಾಧ್ಯ. ನಾವು ಪಾಮರರು, ಭಗವಂತನನ್ನೇ ಮರೆತು ಜೀವಿಸುವವರು, ಇದು ಮಾನವ ಸಹಜಗುಣ, ಆದರೆ, ಭಗವಂತ ಹಾಗೆ ಮಾಡಲು ಸಾಧ್ಯವೆ ? ಮಕ್ಕಳು ಮಾಡಿದ ತಪ್ಪನ್ನು ಹೊಟ್ಟೆಯಲಿರಿಸಿಕೊಂಡ ತಾಯಿ, ಅವರುಗಳನ್ನು ಜಗದಮುಂದೆ ಬೈಯುವುದುಂಟೆ, ಹಾಗೆ ಮಾಡಿದರೆ ಜಗತ್ತು ಅಪಹಾಸ್ಯ ಮಾಡುವುದಿಲ್ಲವೇ. ಪರಮಾತ್ಮನನ್ನು ಜಾಣನೆಂದು ಹೊಗಳಿ ನಮ್ಮನ್ನು ಕಾಪಾಡಲು ಕೋರಿದ್ದಾರೆ.

**ಲೇಖಕಿ: ಶ್ರೀಮತಿ. ವಾಣಿಶ್ರೀ. ಆ. ರಘುವೀರ.**
**ಅಧೀಕ್ಷಕಿ, ಅಕ್ಯಾಡೆಮಿಕ್ ಸೆಕ್ಷನ್, ಜ್ಞಾನ ಸಂಗಮ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ-14**

**ಶೋಧಿಸೆ ಬಂದ ಭೃಗುವನರಿಯದೆ ವೃಥಾ**
**ಕ್ರೋಧವ ಮಾಡಿದಕಾರಣ ವಿಧಿ ರುದ್ರಾ**
**ರಾಧಿಕ್ಯರಾದುದಿಲ್ಲ**
**ವೇದ ಈಶ ಸರ್ವಜ್ಞ ಎಂದು ಪೇಳ್ದ**

ತನ್ನ ಮಹಿಮೆ ಕೆಲಮೊಮ್ಮೆ ಪರಮಾತ್ಮ ತಿಳಿಸಲು ಅನೇಕ ದೃಷ್ಟಾಂತಗಳನ್ನು ಸೃಷ್ಟಿಸುತ್ತಾನೆ. ಇದರಲ್ಲಿ ಭೃಗು ಮುನಿಯು ತ್ರಿಮೂರ್ತಿಗಳ ಶ್ರೇಷ್ಠತ್ವವನ್ನು ಅಳೆಯಲು ಹೊರಟ ಪರಿ. ಇದಕ್ಕೆ ಕಾರಣ ಭೃಗು ಮುನಿಯ ಪಾದದಲ್ಲಿದ್ದ ಮೂರನೇ ನೇತ್ರ. ಅದರಿಂದ ಭೃಗು ಮುನಿ ಗರ್ವದಿಂದ ನಡೆಯುವಂತಾಯಿತು. ಅವನ ಈ ಗರ್ವದಿಂದಲೇ ರುದ್ರ ದೇವರಿಗೆ ಮೂರ್ತಿ ಪೂಜೆಯಿಲ್ಲದೆ ಹೋಯಿತು. ಮಗು ತಾಯಿ-ತಂದೆಯ ತೊಡೆಯ ಮೇಲೆ ಆಡುವಾಗ ಅನೇಕ ಸಲ ಅವರ ಎದೆಯನ್ನು ಒದೆಯುವುದುಂಟು, ಭೃಗುಮುನಿ ಹಯವದನನ ಹೃದಯವನ್ನೊದ್ದಾಗ, ಪರಮಾತ್ಮ ಮೊಮ್ಮಗ ಎದೆಯನ್ನೊದ್ದಕ್ಕೆ ಕೋಪಿಸದೆ, ಅವನನ್ನು ಕ್ಷಮಿಸಿ, ಅವನ ಗರ್ವಕ್ಕೆ ಕಾರಣವಾದ ಮೂರನೇ ನೇತ್ರವನ್ನು ಚಿವುಟಿದನು. ಈ ಪ್ರಸಂಗದಿಂದಲೇ ಅಲ್ಲವೇ ಮಾತೆ ಲಕುಮಿ, ಕೊಲ್ಲಾಪುರದಲ್ಲಿ, ತಂದೆ ವೇಂಕಟೇಶ ತಿರುಪತಿಯಲ್ಲಿ ನಿಂತು ಭಕ್ತರ ಮೊರೆ ಕೇಳುವಂತಾಯಿತು.

**ನಾರಾಯಣನೆಂದು ಚೀರಿದ ಅಜಾಮಿಳ**
**ಸೇರನೆ ಹಯವದನನ್ನರಮನೆಯ ಸಾರಿ ತಾ ಬದುಕಿರನೆ (29)**

ಮಾನವ ಜನ್ಮ ಬರುವುದೇ ಪ್ರಾರಬ್ಧ ಕರ್ಮ ಭೋಗಿಸುವುದಕ್ಕಾಗಿಯೇ. ಈ ನರಲೋಕಕ್ಕೆ ಬಂದ ಮೇಲೆ ಇಲ್ಲಿನ ಪಾಪ ಕೂಪಗಳಲ್ಲಿ ಮುಳುಗದೇ ಇರಲು ಸಾಧ್ಯವೇ. ಈ ಪಾಪಗಳಿಂದ ದೂರವಿರಲು ರಾಮಾಯಣ, ಮಹಾಭಾರತ ಕಥೆಗಳನ್ನು ಕೇಳಿ ಪರಿಹರಿಸಿಕೊಳ್ಳಲು ಸಾಧ್ಯತೆ ಇದೆ. ಸಾಧನೆಗಳನ್ನು ಬಿಡದೆ ಮಾಡುವುದು ನಮ್ಮಂತಹ ಪಾಮರರಿಂದ ಅಸಾಧ್ಯ, ಕಾರಣ ಕೇವಲ ಪರಮಾತ್ಮನ ಕಥೆಗಳನ್ನು ಆಲಿಸುವುದರಿಂದಲೂ ಪಾಪ ಪರಿಹರಿ ಕೊಳ್ಳಲು ಸಾಧ್ಯ. ಅವನ ನಾಮಸ್ಮರಣೆಯಿಂದ ವಿಷ್ಣುಲೋಕವನ್ನು ಹೊಂದಬಹುದು. ಇದಕ್ಕೆ ಅಜಾಮಿಳನ ಉದಾಹರಣೆಯೇ ಸಾಕಲ್ಲವೇ. ಜೀವನ ಪರ್ಯಂತ ಪಾಪಗಳನ್ನೆ ಮಾಡಿದ ಅಜಾಮಿಳ ಪ್ರಾಣ ತ್ಯಜಿಸುವ ಸಮಯದಲ್ಲಿ, ಪರಮಾತ್ಮನನ್ನು ನೆನೆಯದೆ, ತನ್ನ ಮಗನ ಹೆಸರನ್ನು ನಾರಾಯಣ ಎಂದು ಕೂಗಲು ಅವನಿಗೆ ವಿಷ್ಣುಲೋಕ ದೊರೆಯಿತು. ಇದು ಧೊರೆಯ ಕರುಣೆಯ ಸೀಮೆಯನ್ನು ತೋರಿಸುತ್ತದೆ.

**ಆದಿಕಾಲದಲ್ಲಿ ಆಲದೆಲೆಯ ಮೇಲೆ**
**ಶ್ರೀದೇರೊಡನೆ ಮಲಗಿದಾಗ ಆ ದೇವರೆಲ್ಲಿಹರೋ**





# ಶ್ರೀವಾದಿರಾಜರ ಗುಂಡಕ್ರಿಯೆ

ಶ್ರೀ ವಾದಿರಾಜರು ಬ್ರಹ್ಮಸೂತ್ರದಲ್ಲಿ ತಿಳಿಸಿರುವ ಮತಗಳ ಖಂಡನೆಯ ವಿಷಯವನ್ನು ಸೂಕ್ಷ್ಮವಾಗಿ ಸುಲಭವಾಗಿ ಗುಂಡಕ್ರಿಯೆಯಲ್ಲಿ ಅರ್ಥೈಸಿದ್ದಾರೆ.

ಈ ಗ್ರಂಥವು 40 ಶ್ಲೋಕಗಳಿಂದ ಕೂಡಿದ ಜೀವ ಪರಮಾತ್ಮ ಮುಂತಾದ ಇಂದ್ರಿಯ ಗೋಚರವಲ್ಲದ ವಸ್ತುಗಳ ಮತ್ತು ವೇದ ಪ್ರಾಮಾಣ್ಯವನ್ನು ಒಪ್ಪಿ ಅವುಗಳ ಅನುಕರಣವೂ ಆತ್ಮೋದ್ಧಾರಕ್ಕೂ ಲೋಕಕಲ್ಯಾಣಕ್ಕೂ ಉತ್ತಮ ಸಾಧನವೆಂದು ಅಂಗೀಕರಿಸುವ ಮತವು ಆಸ್ತಿಕ್ಯ ಮತವೆಂದು ಹೇಳುತ್ತಾರೆ. ಇವುಗಳನ್ನು ತಿರಸ್ಕರಿಸಿದ ಮತವು ನಾಸ್ತಿಕ್ಯಮತವು. ಅವುಗಳಲ್ಲಿ ಪರಸ್ಪರ ಇರುವ ವ್ಯತ್ಯಾಸಗಳನ್ನು ತಿಳಿಸುತ್ತಾರೆ,

ತತ್ವವಾದಿಗಳ ಆದ್ಯಕರ್ತವ್ಯವೆಂದರೆ ನಾಸ್ತಿಕ್ಯವನ್ನು ಅವರ ವಚನಗಳಿಂದಲೇ ಖಂಡಿಸಿ ಆಸ್ತಿಕ್ಯವನ್ನು ತಿಳಿಸುವುದಾಗಿದೆ. ನಾಸ್ತಿಕ್ಯವಾದವು ಸರಿಯಲ್ಲವೆಂಬುದಕ್ಕೆ ನಾನಾ ದೃಷ್ಟಾಂತಗಳನ್ನು ನೀಡಿ ಅವುಗಳನ್ನು ಸಮ್ಮತವಲ್ಲದ ಸಿದ್ಧಾಂತವೆಂದು ತಿಳಿಸುತ್ತಾರೆ.

ನಾಸ್ತಿಕ್ಯರಲ್ಲಿ ಪ್ರಮುಖರಾದವರು ಚಾರ್ವಾಕರು. ಇವರು ಕಣ್ಣಿಗೆ ಕಂಡದ್ದು ಮಾತ್ರ ಸತ್ಯವೆಂದೂ ಅವುಗಳೇ ಪ್ರಮಾಣವೆಂದು ಹೇಳುತ್ತಾರೆ. ದೇಹ ಮತ್ತು ಜೀವ ಭಿನ್ನವಾದುದೆಂದು ನಂಬುವುದಿಲ್ಲ ಪ್ರಾಚೀನ ಚಾರ್ವಾಕರು ಋಗ್ವೇದದ ಕೆಲವು ವಾಕ್ಯಗಳನ್ನು ಮೇಲೆ ತೋರುವ ಅರ್ಥದಿಂದ ಅರ್ಥೈಸಿ ಸಾಧುವಾದ ಅರ್ಥವನ್ನು ಮುಚ್ಚಿಟ್ಟಿದ್ದಾರೆ ಎಂದು ತಿಳಿಸಿದ್ದಾರೆ. ರಾಜರು ಈ ಮತದ ಖಂಡನೆಯನ್ನು ಬ್ರಹ್ಮಸೂತ್ರದ ಸಮಯಪಾದವನ್ನು ಆದರಿಸಿ ನೀಡಿದ್ದಾರೆ.

ದೇಹವು ಜೀವವು ಒಂದೇ ಎಂಬ ಪಕ್ಷದಲ್ಲಿ ಮೃತರ ದೇಹವನ್ನು ಪ್ರೀತಿಸಲು ಯಾರೂ ಮುಂದಾಗವುದಿಲ್ಲ. ಸರ್ವಾನುಭವ ಸಿದ್ಧವಾದ ಲೌಕಿಕ ಉಕ್ತಿಗೂ ಚಾರ್ವಾಕನ ಮತವು ವಿರುದ್ಧವೆಂದು ಮನಗಾಣಿಸಿದ್ದಾರೆ.

ತನ್ನ ಬಂಧುವು ಮೃತನಾದಾಗ ಚಾರ್ವಾಕನು ಅಳುತ್ತಾನೆ. ತನ್ನ ಮತದಲ್ಲಿ ನಂಬಿಕೆ ಇದ್ದರೆ ಅಳುಕೂಡದಲ್ಲವೇ ಈ ವಿಷಯವನ್ನು, ಹೆಣ್ಣಿನ ದೃಷ್ಟಾಂತದಿಂದ ಬಹಳ ಸಮಂಜಸವಾಗಿ ನೀಡಿದ್ದಾರೆ.

**ಲೇಖಕ: ವಿದ್ವಾನ್ ಆಯಾಚಿತ ಧೀರೇಂದ್ರಾಚಾರ್**
**ಸಂಸ್ಕೃತ ವಿದ್ವಾಂಸ, 33, 12ನೇ ಮುಖ್ಯರಸ್ತೆ, ರಾಘವೇಂದ್ರ ಬಡಾವಣೆ, ಬೆಂಗಳೂರು.**

## ಶ್ರೀನಿವಾಸನ ಸರ್ವೋತ್ತಮತ್ವ

ತಿರುಪತಿಯ ಮಹತ್ವ ಮತ್ತು ತಿಮ್ಮಪ್ಪನ ಸರ್ವೋತ್ಕೃಷ್ಟತ್ವವನ್ನು ತಿಳಿಸುವುದರಲ್ಲಿ ವಾದಿರಾಜರಿಗೆ ಪರಮ ಸಂತೋಷ.

ಶ್ರೀನಿವಾಸನ ನಾಮಸ್ಮರಣೆಯಿಂದ ಸಕಲಪಾಪವು ಪರಿಹಾರವಾಗುತ್ತದೆ. ಈ ವಿಷಯವನ್ನು ಕೆಳಗೆ ತಿಳಿಸಿರುವ ಪದ್ಯದಲ್ಲಿ ರಾಜರು ಅರ್ಥಗರ್ಭಿತನಾಗಿ ತೋರಿದ್ದಾರೆ. ಹರಿನಾಮದ ಪಾಪಪರಿಹಾರದ ಶಕ್ತಿಗೆ ಸಾಕಷ್ಟು ಪಾಪಗಳನ್ನು ಪಾಪಜನ ಸಮುದಾಯವೂ ಮಾಡಲಾಗದು ಎಂದು ನಿಕರವಾಗಿ ನಾಮೋಚ್ಚಾರಣ ಮಹತ್ವವನ್ನು ಹೇಳುವಲ್ಲಿ ಈ ಕೃತಿಯು ಉತ್ತಮ ನಿದರ್ಶನವಾಗಿದೆ.

ಭವಿಷ್ಯೋತ್ತರ ಪುರಾಣದ ವಿಚಾರವನ್ನು ಸರಳ ಮತ್ತು ಸುಲಲಿತವಾಗಿ ಬಿಡಿಸಿ ಹೇಳುವದು ರಾಜರ ಮುಖ್ಯ ಉದ್ಧೇಶ.

**ಗುಣಗ್ರಾಹಿ ಶ್ರೀನಿವಾಸೋ ಧನದಾಯಿ ಧನೇಶ್ವರಃ** ಎಂಬ ಈ ವಾಕ್ಯದ ಅನುವಾದವೇ ಈ ಕೆಳಗಿನ ಸಾಲುಗಳು

**ಆ ದೇವ ಈ ದೇವನೆಂದ್ಯಾಕೆ ಕಲಹ ನಾ-**
**ನಾ ದೇವದವರಿಗೆ ಬೇಡಿದಿಷ್ಟವನೀವ**
**ಸಾಧಿಸಿದ ಧನದಿ**
**ಈ ಧರೆಯೊಳಗಿರ್ದ ರಾಯಗೆ ಕೋಟಿ ದ್ರವ್ಯಾದಿಕತನ ಕೊಟ್ಟ**
**ವಾದವ ಮುರಿದ ವೆಂಕಟಗಿರಿರಾಯ ನಂ-**
**ಥಾ ದೇವನ್ನ ತೋರೋ**
**ಶ್ರೀದೇವಿಯುರದ ತಿಮ್ಮಯ್ಯರಾಯಗೆ ಪ್ರತ್ಯ-**
**ಕ್ಷದಿ ಎಣೆಗಾಣೆ ಹಯವದನ್ನನ**
**ಪಾದಪದುಮದಾಣೆ॥**

**- ಶ್ರೀಹರಿದಾಸ ಭಾರತೀ ಗ್ರಂಥರತ್ನಮಾಲೆ (ಪುಟ 95)**





## ಜ್ಞಾನದ ಕೊಡ ತುಂಬುವ ಗುಂಡಕ್ರಿಯೆಯ ಧಾರೆ

**ತನ್ನಮೊಗವ ತಾ ಕಾಣಲರಿಯದಲೆ**
**ಕನ್ನಡಿಯನು ತಾಹ ಮನ್ನುಜಜಾತಿಯ**
**ಮೊನ್ನೆಮೊನ್ನೆಗೆ ಸರ್ವಜ್ಞ**
**ತನ್ನನ್ನೆ ಕೂಡಿರ್ದ ನಾಡಿಯ ತೋರಿಸಿ ತನ್ನುನ ಸ್ಥಿಯ**
**ಅನ್ಯರ ಕೇಳನೆ ಪಂಚಾಂಗದೊಂದೊಂದು ದಿನ್ನ ದಿನ್ನ ನೋಡನೆ**

ಮಾನವರ ಪರಾವಲಂಬನೆಯನ್ನು ಇಲ್ಲಿ ಗುರುಗಳು ತೋರಿದ್ದಾರೆ. ನಮ್ಮ ಮುಖವನ್ನು ನೋಡಲು ನಮಗೆ  ಕನ್ನಡಿ ಬೇಕು. ನಮ್ಮ ದೇಹದ ಆರೋಗ್ಯದ ಸ್ಥಿತಿ ತಿಳಿಯಲು, ನಮ್ಮ ದೇಹದ ನಾಡಿಯನ್ನು ಇನ್ನೊಬ್ಬನು ಪರೀಕ್ಷಿಸಿ, ಮದ್ದು ನೀಡುವನು. ನಮ್ಮ ಮುಂದಿನ ಸ್ಥಿತಿ ಗತಿ ತಿಳಿಯಲು, ಪಂಚಾಂಗದ ಆಸರೆ ಬೇಕು. ಚಿಕ್ಕ ಚಿಕ್ಕ ವಿಷಯಗಳಿಗೆ ಇನ್ನೊಬ್ಬರನ್ನು ಅವಲಂಬಿಸುವುದು ಮಾನವ ಸಹಜ ಗುಣವಾಗಿದೆ.

ಆದರೆ, ಈ ಅವಲಂಬನೆ ಪರಮಾತ್ಮನ ಮೇಲೆ ಇದ್ದರೆ, ಬೇರೆ ಯಾರ ಸಹಾಯದ ಅವಶ್ಯಕತೆ ಇರುವುದಿಲ್ಲ. ಅವನ ಕೃಪಾ ಕಟಾಕ್ಷವೊಂದಿದ್ದರೆ, ಇತರರ ಉಪಕಾರ ಮನೋಭಾವದ ಸಹಾಯ ಏಕೆ?

**ರಾಮಾದ್ಯವತಾರದಿಂದ ಮುರಿದ ಬಿಲ್ಲು ಆ ಮಹೇಶನದಲ್ಲದೆ**
**ಶ್ರೀಮುಡಿಯಲಿ ವಿಷ್ಣುಪದಿಯೆಂಬ ನದಿ ಪೊತ್ತ**
**ಆ ಮಹಾದೇವ ಹಯವದನನೆಂತಾಹ**
**ನೀ ಮಾನವನೆಂತಾಹೆಯೋ (20)**

ನಾವು ಹುಲು ಮಾನವರು ಹರಿ-ಹರರ ಕುರಿತು ಅನೇಕ ದೃಷ್ಟಾಂತಗಳನ್ನು ಹೇಳುವುದುಂಟು. ನಮಗೆ ಅವರ ಶ್ರೇಷ್ಠತೆಯನ್ನು ಅಳೆಯಲು ಸಾಧ್ಯವೇ. ಹರನು ತನ್ನ ಜಟೆದಿಂದಲೇ ಭಾಗೀರಥಿಯನ್ನು ಕಟ್ಟಿ ಹಾಕಿದ. ವಾಮನ ಅವತಾರದಲ್ಲಿ ಬಲಿಯಿಂದ ದಾನವ ಬೇಡಿದ, ಪಾದವನ್ನು ಆಕಾಶಕ್ಕೆ ತೋರಿದ, ಆ ಪಾದದ ನಖ ಬ್ರಹ್ಮಾಂಡ ಖರ್ಪರಕ್ಕೆ ತಾಗಿ, ಅದು ಒಡೆದು ಭಾಗೀರಥಿಯ ಜನನವಾಯಿತು. ರಾಮಾವತಾರದಲ್ಲಿ, ಸೀತಾ ಸ್ವಯಂವರದಲ್ಲಿ ರಾಮ ಮುರಿದ ಬಿಲ್ಲು ಮಹೇಶನದು. ಹೀಗೆ, ಹರಿ-ಹರರ ಲೀಲೆಗಳು, ಅವರಲ್ಲೇ ತಳುಕು ಹಾಕಿಕೊಂಡಿರುವಾಗ, ನಾವು ಅವರ ಶ್ರೇಷ್ಠತೆಯನ್ನು ಅಳೆಯಲು ಸಾಧ್ಯವೇ.

## ತತ್ವವಾದ ಸಂಪದ - ಬಾಳ ಬೆಳಕಿನ ದಾರಿ

ಋಜುಗಣಸ್ಥರೆಂದೂ, ಭಾವೀಸಮೀರರೆಂದೂ ಪ್ರಖ್ಯಾತರಾದ ಶ್ರೀವಾದಿರಾಜತೀರ್ಥರು ಶ್ರೀವಾಗೀಶತೀರ್ಥರಿಂದ ಪ್ರಣವ ಮಂತ್ರದೀಕ್ಷೆಯನ್ನು ಪಡೆದು ದೀರ್ಘಾವದಿ ಪರಮಹಂಸಾಶ್ರಮದಲ್ಲಿ ಸೂರ್ಯನಂತೆ ಮೆರೆದವರು. ಅವರು ರಚಿಸಿದ ಗ್ರಂಥಗಳ ಪಟ್ಟಿ ಅದ್ಭುತವೆನಿಸುವಷ್ಟಾಗಿವೆ. ಟೀಕೆ ಟಿಪ್ಪಣಿಗಳು, ಸ್ವತಂತ್ರ ಗ್ರಂಥಗಳು, ಸ್ವತಂತ್ರ ಕಾವ್ಯಗಳು ಸ್ತೋತ್ರಗಳು, ಕನ್ನಡ ಗ್ರಂಥಗಳು ಮತ್ತು ನೂರಾರು ದೇವರನಾಮಗಳು ಹಾಗೂ ತುಳುಪಾಡ್ದನಗಳು ಇತ್ಯಾದಿ.

**ಗುಂಡಕ್ರಿಯೆ** ಸಂಗೀತದ ಒಂದು ರಾಗವೂ ಆಗಿದೆ. ಶ್ರೀಹರಿಯ ಮನಸ್ಸನ್ನು ಕರಗಿಸಿ ಭಕ್ತಿಯನ್ನು ಚಿಗುರೊಡೆಸುವ ಶಕ್ತಿ ಈ ರಾಗಕ್ಕಿದೆ ಎಂಬುದಾಗಿಯೂ ಅರ್ಥೈಸಬಹುದಾಗಿದೆ.

ದೇಹ, ಜೀವ ಒಂದೇ ಎಂಬ ವಾದಿಗಳಿಗೆ ರಾಜರು ಹಾಕುವ ಸವಾಲು ಶ್ರೀಹಯವದನ ಇಂತಹ ದುರ್ವಾದಗಳನ್ನು ಸಹಿಸುವುದಿಲ್ಲ ಎನ್ನುತ್ತಾರೆ.

**ಬುದ್ಧಿವಂತರು ಕೂಡಿ ದ್ವೈತ ಮತವನ್ನು**
**ಹೊಂದಿ ಬದುಕಿ ಸಿರಿಹಯವದನನ ಪಾದ ಪದ್ಮವನ್ನು ಭಜಿಸಿರೋ**

ಎಂದು ಬುದ್ಧಿವಾದ ಹೇಳುತ್ತಾರೆ.

**ನಾರಾಯಣನೆಂದು ಚೀರಿದ ಅಜಾಮಿಳಸೇರನೇ**
**ಹಯವದನನ್ನರ ಮನೆಯ ಸಾರಿಕಾ ಬದುಕಿರನೇ**

ನರಕ ಕೂಪದಲ್ಲಿ ಬಿದ್ದು ಬೇಯುವ ಹರಿದ್ವೇಷಿಗಳಿಗೆ ರಾಮಾಯಣ ಮಹಾಭಾರತಗಳನ್ನು ಹಿರಿಯರಿಂದಲಿ ಕೇಳಿ ತಿಳಿದುಕೊಂಡು ನಾರಾಯಣನನ್ನು ಸ್ಮರಿಸಿ ಎನ್ನುತ್ತಾರೆ. ಹೀಗೆ ನಲವತ್ತು ಪದ್ಯಗಳಲ್ಲೂ ಒಂದೊಂದು ಬುದ್ಧಿಮಾತನ್ನು ಹೇಳಿ

**ನಾನಿನ್ನ ಮರೆತರೂ ನಿನ್ನ ಮರೆತರೆ ಹಾನಿ**

ಎಂದು ಹಯವದನನಿಗೆ ಅರ್ಪಿಸುತ್ತಾರೆ.

**ಲೇಖಕ: ಹೆಚ್. ಪಿ. ನಾಗರಾಜರಾವ್**
**ಶ್ರೀಹರಿನಿವಾಸ ಟಿ.ಬಿ. ರಸ್ತೆ ಕಡೂರು-577548**
**ಲೇಖಕ: ಪಂಕಜಾ ಸುಬೋಧ**
**ನಂ. 125/ಜಿ, ಹರಿತಸ ನೆಹರೂ ರಸ್ತೆ ಗಿರಿನಗರ ಮೊದಲಹಂತ ಬೆಂಗಳೂರು-85**





ಸರ್ವಾಭೀಷ್ಟಗಳನ್ನು ಸರ್ವರಿಗೂ ಸರ್ವಕಾಲದಲ್ಲಿಯೂ ಪ್ರಧಾನ ಮಾಡುವ ಏಕೈಕ ದೇವತೆಯೆಂದರೆ ವೆಂಕಟಾಚಲಪತಿ ಎಂಬುದನ್ನು ವಾದಿರಾಜರು ಯುಕ್ತಿಯಿಂದ ಸಾಧಿಸುತ್ತಾರೆ. ಭಿನ್ನ ದೇವತಾಭಕ್ತರು, ಭಿನ್ನ ಮತೀಯರು ಏಕ ಪ್ರಕಾರವಾಗಿ ಶ್ರೀನಿವಾಸನನ್ನು ಮೊರೆಹೊಂದಿ ತಮ್ಮ ತಮ್ಮ ಅಭೀಷ್ಟಗಳನ್ನು ಹೊಂದುತ್ತಾರೆ.

ಪದ್ಮಾವತಿಯನ್ನು ವಿವಾಹ ಮಾಡಿಕೊಳ್ಳುವ ಸಂದರ್ಭದಲ್ಲಿ ಶ್ರೀನಿವಾಸನು ಲೌಕಿಕ ಪುರುಷರಂತೆ ವಿಡಂಬನ ಮಾಡುತ್ತಾನೆ. ಕುಬೇರನಿಂದ 14 ಲಕ್ಷ ರಾಮಠಂಕಿ ವರಾಹಗಳನ್ನು ಸಾಲವಾಗಿ ಪಡೆಯುತ್ತಾನೆ. ಅಂದಿನಿಂದ ಸಾವಿರ ವರ್ಷಗಳ ಕಾಲದಲ್ಲಿ ಬಡ್ಡಿ ಸಮೇತ ತಿರುಗಿಸಿಕೊಡುವುದಾಗಿ ಒಪ್ಪಿರುತ್ತಾನೆ.

ಶ್ರೀನಿವಾಸನ ಆಜ್ಞೆಯಂತೆ ತೋಂಡಮಾನರಾಜನಿಂದ ನಿರ್ಮಿಸಲ್ಪಟ್ಟ ಭವ್ಯವಾದ ದೇವಸ್ಥಾನದಲ್ಲಿ ಇಂದಿಗೂ ಸನ್ನಿಹಿತನಾಗಿದ್ದು ಭಕ್ತರು ಸಲ್ಲಿಸುವ ಧನವನ್ನು ಕುಬೇರನಿಗೆ ಸಾಲವಾಗಿ ಹಿಂತಿರಿಗಿಸಲು ವ್ಯವಸ್ಥೆಯನ್ನು ಮಾಡಿರುತ್ತಾನೆ.

ಕುಬೇರನ ಕಡೆಯವರಾದ ಮಹಾಂತರನ್ನು ದೇವಾಲಯದ ಸರ್ವಾಧಿಕಾರಿಗಳಾಗಿ ವಂಶಪಾರಂಪರ್ಯವಾಗಿ ಸ್ಥಾಪಿಸಿದ್ದಾನೆ ಎಂಬ ವಿಶ್ವಾಸವು ಇಂದಿಗೂ ಇದೆ.

ಹೀಗೆ ಎಲ್ಲ ಭಕ್ತರ ವಿಶ್ವಾಸವನ್ನು ನಿಧಿಯಾಗಿ ಇಟ್ಟುಕೊಂಡಿರುವ ಕಥಾ ವಿಶೇಷವನ್ನು ರಾಜರು ಇಲ್ಲಿ ಸ್ಮರಿಸಿದ್ದಾರೆ.

ಆಕಾಶರಾಜನ ತಮ್ಮ ತೋಂಡಮಾನನಿಗೂ, ಆಕಾಶರಾಜನ ಮಗ ವಸುದಾನವನನಿಗೂ ರಾಜ್ಯನಿಮಿತ್ತ ವಿವಾದಹುಟ್ಟಿ, ಯುದ್ಧಾರಂಭವಾಯಿತು. ಆಗ ಪದ್ಮಾವತಿಯ ಪ್ರಾರ್ಥನಾನುಸಾರ ಶ್ರೀನಿವಾಸನು ಉಭಯರಲ್ಲಿ ಸಂಧಿಮಾಡಿಸಿ, ಪರಸ್ಪರ ಸೌಹಾರ್ದವನ್ನು ಉಂಟುಮಾಡಿದನೆಂಬ ಸರ್ವಸಮ್ಮತ ಮಹಿಮೆಯನ್ನು ಸರ್ವೋತ್ತಮತ್ವದ ಸಮರ್ಥನೆಗಾಗಿ ನಿದರ್ಶನರೂಪದಿಂದ ಹೇಳಿದನೆಂದು ತಿಳಿಯಬಹುದಾಗಿದೆ. **ಅಥ ಪದ್ಮಾವತೀಪ್ರಾರ್ಥನಯಾ ಶ್ರೀನಿವಾಸಕೃತತೋಂಡಮಾನ ವಸುದಾನಸಂಧಿಕ್ರಮಃ** ಎಂಬ ಶೀರ್ಷಿಕೆಯ ಭವಿಷ್ಯೋತ್ತರ ಪುರಾಣೋಕ್ತಿಯು ಈ ಸೂಚನೆಯನ್ನು ಸಮರ್ಥಿಸುತ್ತದೆ.

**ಲೇಖಕಿ: ಸೌ|| ಅನುರಾಧ ಅರವಿಂದ ಕಟ್ಟಿ,**
**ಗೃಹಿಣಿ, ಬೆನಕ, 3ನೇ ಅಡ್ಡರಸ್ತೆ, ಪಿಸಿ ಬಡಾವಣೆ, ಕೋಲಾರ-563101.**

ಶ್ರೀ ವಾದಿರಾಜರ ಗುಂಡಕ್ರಿಯೆಯ

ಒಂದು ಅಧ್ಯಯನ

## ಶ್ರೀಹರಿ ಸರ್ವರ ಪಿತೃ

**ಅವನ ನಾಭಿಕಮಲದಲ್ಲಿ ಪುಟ್ಟಿದ**
**ದೇವ ಪಿತಾಮಹ ಎನಿಸಿಕೊಂಬುವನಾಗಿ ಜೀವರಾಶಿಗೆ ಎಲ್ಲ**
**ಈ ವಿಷ್ಣುವಿಗೆ ಆ ದಿವಿಜರೇನಾಹರೆಂದು ಅವ ಸರ್ವೇಶನೆಂದು**
**ನೀವಿಟ್ಟ ಪಿಂಡವು ಆರ ಪಾಲಾಹುದೆಂದು ಭಾವಜ್ಞರೆಲ್ಲಕೇಳಿ**
**ದೇವ ಹಯವದನನೊಲ್ಲದ ವಾದಿಗೆ**
**ತಾವುದಿಸಿ ತಾಯಿಲ್ಲ ಎಂಬ ಗಾದೆ ಬಹುದು ಸೇವಿಸಿವನ ಜೀವ॥**

- ಶ್ರೀಹರಿದಾಸ ಭಾರತೀ ಗ್ರಂಥರತ್ನಮಾಲೆ (ಪುಟ 97)

ರಾಜರು ಪಿತ ಅಥವಾ ತಂದೆ ಎಂದರೆ ಸರ್ವರಿಗೂ ತಂದೆಯಾದ ಪರಮಾತ್ಮ ಎಂಬುದನ್ನು ಮೇಲೆ ಕಂಡ ಸಾಲುಗಳಲ್ಲಿ ದೃಷ್ಟಾಂತದೊಂದಿಗೆ ಸ್ಫುಟವಾಗಿ ತಿಳಿಸಿದ್ದಾರೆ.

ಶ್ರಾದ್ಧಾದಿಗಳಲ್ಲಿ ಪಿಂಡಗಳನ್ನು ಅರ್ಪಿಸುವಾಗ ಜಗತ್ ಪಿತನಾದ ಹರಿಯ ಸ್ತೋತ್ರಾರ್ಥವಾಗಿಯೇ ಎಂಬ ಅನುಸಂಧಾನವು ಬಹಳ ಮುಖ್ಯವಾದುದು. ಈ ತತ್ವವನ್ನು ತಿಳಿಸಲು ಪಿಂಡಗಳು ಯಾರ ಪಾಲು ಎಂಬುದಕ್ಕೆ ಪ್ರದ್ಯುಮ್ನ, ಸಂಕರ್ಷಣ, ವಾಸುದೇವನ ರೂಪಗಳು ಪಿತೃ, ಪಿತಾಮಹ ಮತ್ತು ಪ್ರಪಿತಾಮಹರಲ್ಲಿ ಅಂತರ್ಯಾಮಿಯಾಗಿದ್ದು ಸ್ವೀಕರಿಸುತ್ತಾನೆಂದು ತಿಳಿಯಬೇಕು.

ಇಲ್ಲಿ ಪಿತಾಮಹನೆಂದರೆ ತಂದೆಯ ತಂದೆ ಎಂದರ್ಥವಲ್ಲ ಪದ್ಮನಾಭನ ನಾಭಿ ಕಮಲದಲ್ಲಿ ಹುಟ್ಟಿ ಸೃಷ್ಟಿಕರ್ತನೆಂದು ಪ್ರಸಿದ್ದನಾದ ಬ್ರಹ್ಮನು ಮೂಲಪಿತ ಅವನಿಂದಲೇ ಎಲ್ಲ ಪ್ರಾಣಿಗಳು ಹುಟ್ಟಿರುವದು. ಆದ್ದರಿಂದ ಬ್ರಹ್ಮನನ್ನು ಸೃಷ್ಟಿಸಿದ ಶ್ರೀಹರಿಯು ಸಾಕ್ಷಾತ್ ಜಗತ್‌ಪಿತನು ಅಥವಾ ಪಿತಾಮಹನು. ಹೀಗಿರುವಾಗ ಪಿತೃದೇವತೆಗಳೇ ಮೊದಲಾದ ಎಲ್ಲರೂ ಶ್ರೀಹರಿಗೆ ಪುತ್ರಸಂತಾನರಲ್ಲವೇ ಆದ್ದರಿಂದ ಶ್ರೀಹರಿಯನ್ನು ಸರ್ವರೂ ಪಿತೃಭಾವದಿಂದ ಸೇವಿಸಬೇಕು.

ಮಹಾಲಕ್ಷ್ಮೀದೇವಿಯ ಅಂತರ್ಯಾಮಿಯಾಗಿ ಸ್ತ್ರೀ ರೂಪದಿಂದ ಇರುತ್ತಾನೆ ಆದ್ದರಿಂದ ಅವನು ಸರ್ವರಿಗೂ ಜಗಜ್ಜನನೀ ಎನಿಸಿಕೊಳ್ಳುತ್ತಾನೆ.

ಈ ಪದ್ಯದಲ್ಲಿ ರಾಜರು ಶ್ರೀಹರಿಗೆ ಪಿತೃತ್ವವನ್ನು ಹೇಳುತ್ತಾರೆ.

**ಲೇಖಕ: ಆದೋನಿ ವಾಸುದೇವಾಚಾರ್ಯ**
**ನಂ. 165, 1ನೇ, ಎ. ಮುಖ್ಯರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು-85**



ಶ್ರೀ ವಾದಿರಾಜರ ಗುಂಡಕ್ರಿಯೆಯ

ಒಂದು ಅಧ್ಯಯನ

## ವ್ಯೋಮಕೇಶದವನೊಬ್ಬ-ವ್ಯೋಮಪಾದದವನೊಬ್ಬ

ಗುಂಡ ಎಂಬ ಪದಕ್ಕೆ ಪೂರ್ಣ ಎಂಬ ಅರ್ಥ ಬರುವುದಿಂದ ಪರಿಪೂರ್ಣನಾದ ಭಗವಂತನ ಮಹಿಮೆಯೇ **ಗುಂಡಕ್ರಿಯೆ** ಎಂದು ತಿಳಿಯಬೇಕು. ಲಾತವ್ಯ ಋಜುಗಣಸ್ತರಾದ ಪೂಜ್ಯ ಶ್ರೀವಾದಿರಾಜರು **ಗುಂಡ ಕ್ರಿಯೆ** ಎಂಬ ಒಂದು ದಿವ್ಯವಾದ ಅಲೌಕಿಕ ಗ್ರಂಥವನ್ನು ರಚಿಸಿ 40 ನುಡಿಗಳಲ್ಲಿ ಹರಿಯ ಸರ್ವೋತ್ತಮತ್ವ ಪ್ರತಿಪಾದನ, ದುರ್ಮತ ಖಂಡನ ಮಾಡಿ ಭಕ್ತರಲ್ಲಿ ಕ್ರಿಯಾ ಶೀಲತೆಯನ್ನು ಉಂಟು ಮಾಡಿರುವರು.

ಶ್ರೀವಾದಿರಾಜ ಗುರುಗಳು ಗುಂಡ ಕ್ರಿಯೆಯಲ್ಲಿ ಹದಿಮೂರು ನುಡಿಗಳವರೆಗೂ ಸಪ್ತಭಂಗಿವಾದ ಸ್ಯಾದ್ವಾದಿ ಜೈನ ಮತವನ್ನು, ಷಡ್ದರ್ಶನದಲ್ಲಿರುವ ಅಪೌರುಷೇಯ ಮತಗಳನ್ನು, ಬೌದ್ಧಾದಿ ಮೋಹಶಾಸ್ತ್ರಗಳನ್ನು ನಿರಾಕರಿಸಿ 14ನೆ ನುಡಿಯಿಂದ ಹರಿ ಸರ್ವೋತ್ತಮತ್ವ, ಜೀವರಾಶಿಗಳ ಸೃಷ್ಟಿ ತ್ರೈಲೋಕ್ಯ ಜೀವರುಗಳ ಯೋಗ್ಯತೆ, ಲಕ್ಷಾಂತರ ಯೋನಿಗಳಲ್ಲಿ ನೆಲೆಸಿರುವ ಬಿಂಬರೂಪಿ ಹರಿಯನ್ನು ವರ್ಣಿಸುತ್ತಾರೆ. ಆರು ಶಾಸ್ತ್ರಗಳನ್ನು ಬಲ್ಲವರು ಸಹಿತ ಭಗವಂತನ ಉಪಾಸನೆಯನ್ನು ಅವಶ್ಯ ಮಾಡಬೇಕೆಂದು ನುಡಿದಿರುವರು. ಇಲ್ಲಿ ಒಂದು ನುಡಿಯನ್ನು ವಿಶ್ಲೇಷಣ ಮಾಡಲಾಗಿದೆ.

**ವ್ಯೋಮಕೇಶನೊಬ್ಬ ವ್ಯೋಮಪಾದನೊಬ್ಬ**
**ಭ್ರಾಮಕವರವೀವನೊಬ್ಬ ಕೊಲ್ಲುವನೊಬ್ಬ ಕಾಮದಕ್ಷಾದಿಗಳ**
**ಸೀಮೆಯೆರಿಯೆ ಕೊಂದವನೊಬ್ಬ ರಕ್ಷಿಸಿದಾ ಮಹಾಪುರುಷನೊಬ್ಬ**
**ರಾಮಾದ್ಯವತಾರದಿಂದ ಮುರಿದ ಬಿಲ್ಲು ಆ ಮಹೇಶನದಲ್ಲವೆ**
**ಶ್ರೀ ಮುಕ್ತಿಯಲಿ ವಿಷ್ಣುಪದಿಯೆಂಬ ನದಿಪೊತ್ತ**
**ಆ ಮಹಾದೇವ ಹಯವದನನೆಂತಾಹ ನೀ ಮಾನವನೆಂತಾಹೆಯೋ॥**

ಆಕಾಶ ಗಂಗೆಯನ್ನು ಜಟೆಯಲ್ಲಿ ಧಾರಣ ಮಾಡಿದವನು ಶಿವನಾದರೆ ಆಕೆಯನ್ನು ಪಾದದಲ್ಲಿ ಧರಿಸುವ ತ್ರಿವಿಕ್ರಮನು ಶ್ರೇಷ್ಠನೇ ಹೊರತು ಸಮನಲ್ಲ. ದೈತ್ಯರು ಸಾಯಬಾರದೆಂಬ ಭ್ರಮದಿಂದ ಶಿವ ಬ್ರಹ್ಮಾದಿಗಳಿಂದ ವರವನ್ನು ಪಡೆದಿದ್ದರೂ ರಾಮಕೃಷ್ಣರೂಪಗಳಾದ ವಿಷ್ಣುವಿನಿಂದ ಕೊಲ್ಲಲ್ಪಟ್ಟರು. ಮಹಾಪರಾಕ್ರಮಶಾಲಿಯಾದ ಶ್ರೀರಾಮನು ಶಿವನ ಬಿಲ್ಲನ್ನು ತನ್ನ ವಾಮಹಸ್ತದಿಂದಲೇ ಮುರಿದಿಟ್ಟನು. ಇದೆಲ್ಲವನ್ನೂ ಕೇಳಿ ಇವರಲ್ಲಿ ಯಾರು ಉತ್ತಮರು ಎಂಬ ತತ್ವವನರಿಯದವನು ಮಾನವ ಪದಕ್ಕೆ ಬರಲರ್ಹನಲ್ಲ ಎಂದು ಶ್ರೀ ವಾದಿರಾಜರು ನುಡಿದಿರುವರು.

**ಲೇಖಕ : ಶ್ರೀರುಕ್ಮಿಣೀಶ ವಿಠಲದಾಸರು(ಡಾ॥ ಕೆ.ಆರ್.ರಾವ್)**
**3-286-3,ಹನುಮದ್ವಿಲಾಸ, ತಪೋವನಂ, ಅನಂತಪುರಂ-4**

ಶ್ರೀ ವಾದಿರಾಜರ ಗುಂಡಕ್ರಿಯೆಯ

ಒಂದು ಅಧ್ಯಯನ

**ಕಳ್ಳ ಭಕ್ತರಿಗೆ ಸಲ್ಲದು ಶುಭಫಲ**
**ಎಲ್ಲ ಬೀಜಕೆ ಸಲ್ಲದು ಸಲ್ಲಿಕೆ**
**ಎಲ್ಲಿ ಯೋಗ್ಯತೆ ಉಂಟೋ**
**ಅಲ್ಲಿಯೇ ಫಲ ಅದಿಲ್ಲದವರಿಗಿಲ್ಲ**
**ಬಲ್ಲ ಬುಧರು ಕೇಳಿರೋ**
**ಎಲ್ಲ ಸಾಧನಗಳೊಲ್ಲದವಗೆ ಈ**
**ಫಲ ದುರ್ಲಭ ಕಾಣಿರೋ**
**ಬಲ್ಲಿದ ಹಯವದನ ನೊಲ್ಲಿದಾಗಲೇ ಅ**
**ಹವ್ವೆಯಿದ್ದ ಶಿಲೆ ಹೆಣ್ಣಾದವೊಲು ಇಂ**
**ತಳಿದದ್ದು ಹೆಣ್ಣಾಯಿತೇ**

ಬಹಿರಂಗದಲ್ಲಿ ಮಾತ್ರ ಭಕ್ತಿತೋರಿಸುವ ವಂಚಕರಿಗೆ ಎಂದಿಗೂ ಫಲವು ದೊರೆಯುವುದಿಲ್ಲ. ರೈತ ಹೊಲದಲ್ಲಿ ಬಿತ್ತನೆ ಮಾಡುವ ಬೀಜಗಳಿಗೆ ಸ್ವರೂಪದ ಯೋಗ್ಯತೆ ಇದ್ದು, ಅವನು ಸರಿಯಾಗಿ ಗೊಬ್ಬರ ಹಾಕಿ, ಪ್ರಯತ್ನ ಮಾಡಿದರೆ, ಶ್ರೀಹರಿಯ ಒಲುಮೆಯಿಂದ ಫಲಬರುವುದು. ಜೀವನ ಯೋಗ್ಯತೆ, ಪ್ರಯತ್ನ ಶ್ರೀಹರಿ ಕೃಪೆ ಇದ್ದರೆ ಮಾತ್ರ ಉತ್ತಮ ಫಲ ಸಿಗುವುದೆಂದು ಶ್ರೀವಾದಿರಾಜರು ನುಡಿದಿರುವರು.

**ಲೇಖಕಿ : ಶ್ರೀಮತಿ ಶ್ಯಾಮಲ ಆರ್. ರಾವ್(ಪ್ರಾಣನುತ ನರಸಿಂಹ)**
**3-286-3, ಹನುಮದ್ವಿಲಾಸ, ತಪೋವನಂ, ಅನಂತಪುರಂ -4**

**ಕಾಕೋಳು ಶ್ರೀವೇಣುಗೋಪಾಲಸ್ವಾಮಿ**
**ದೇವಸ್ಥಾನ ಬ್ರಹ್ಮರಥೋತ್ಸವ**
**ದಿನಾಂಕ 18-3-2010 ರಿಂದ**
**21-3-2010**





**ಕಾಕೋಳು ಕ್ಷೇತ್ರ, ಬೆಂಗಳೂರು-89.**
9845075250



ಶ್ರೀ ವಾದಿರಾಜರ ಗುಂಡಕ್ರಿಯೆಯ

ಒಂದು ಅಧ್ಯಯನ

# ಭಗವಂತನ ಅಚಿಂತ್ಯ ಶಕ್ತಿ

**ಜೀವರಾಶಿಭಿರಾಕೀರ್ಣ ಅಂಶಕೋಶಾಂಘ್ರಿಪೋ ಮಹಾನ್** (ಭಾಗವತ) ವಿಶಾಲವಾದ ಬ್ರಹ್ಮಾಂಡವೆಂಬ ವೃಕ್ಷವು ಜೀವರಾಶಿಗಳಿಂದ ತುಂಬಿದೆ. ಒಂದೊಂದು ರಾಶಿಯಲ್ಲಿ ಅಸಂಖ್ಯ ಜೀವರಿದ್ದಾರೆ. ಈ ವಿಷಯವನ್ನು **ಪರಮಾಣು ಪ್ರದೇಶೇಪಿ ಹ್ಯನಂತಾ ಜೀವರಾಶಯಃ** ಎಂಬ ವಿಷ್ಣುತತ್ತ್ವವಿನಿರ್ಣಯದ ವಾಕ್ಯವು ಪುಷ್ಟೀಕರಿಸುತ್ತದೆ. ಈ ವಿಷಯವನ್ನು ವೈಜ್ಞಾನಿಕವಾಗಿಯೂ ಸಮರ್ಥಿಸ ಬಹುದು ಧೂಳಿನಕಣಗಳಲ್ಲಿಯೂ ಜೀವರಾಶಿಗಳು ಇರುತ್ತವೆಂಬುದು ನಿರೂಪಿಸಲ್ಪಟ್ಟಿದೆ. ಇಂತಹ ಚಿಕ್ಕದಾದ ಪರಮಾಣುಗಳಲ್ಲಿಯೂ ಭಗವಂತನು ಇರುತ್ತಾನೆಂದರೆ ಎಷ್ಟು ಸೂಕ್ಷ್ಮ ಮಹತ್ತಾಗಿರುವನೆಂದು ತಿಳಿಯಲು ಅಶಕ್ಯವಾಗುತ್ತದೆ. ಇವುಗಳಿಂದ ಪರಮಾಣುಗಳಲ್ಲಿಯೂ ಅನಂತಗುಣ ಸಂಖ್ಯೆಯ ಜೀವರಾಶಿಗಳಿರುತ್ತವೆಂಬುದು ನಿರೂಪಿತವಾದಂತೆ ಆಗುತ್ತದೆ.

ದೇವ-ದಾನವ-ಮಾನವ-ಪಶು-ಪಕ್ಷ್ಯಾದಿ 84 ಲಕ್ಷ ಗುಂಪಿನ ಜೀವರಾಶಿಗಳಾಗಿ ವಿಂಗಡಿಸಬಹುದೆಂದು ಹೇಳುಬಹುದಾಗಿದೆ. ಆಧುನಿಕ ವೈಜ್ಞಾನಿಕ ಉಪಕರಣಗಳ ಸಹಾಯಗಳಿಂದ ಕ್ರಿಮಿ-ಕೀಟಾದಿಗಳನ್ನು ಗಮನಿಸಿದರೆ ಒಂದೊಂದು ಯೋನಿಯಲ್ಲಿಯೂ ಅಸಂಖ್ಯ ಜೀವರು ದೇಹವನ್ನು ಹೊಂದುತ್ತಾರೆ. ಪ್ರತಿಜೀವ-ಚೇತನರಲ್ಲಿಯೂ ಹರಿಯು ಅಂತರ್ಯಾಮಿಯಾಗಿ ಬಿಂಬರೂಪದಿಂದ ನೆಲೆಸಿರುತ್ತಾನೆ.ಹೀಗೆ ಜೀವ-ಬಿಂಬಗಳೇ ಅನಂತವಾಗಿರುತ್ತವೆ. ಎಲ್ಲವೂ ಭಗವದಾಧೀನವಾಗಿವೆ.

ಸಕಲ ವಸ್ತುಗಳಲ್ಲಿ ಶ್ರೀಹರಿಯು ಸಮವಾಗಿ ಅನಂತರೂಪಗಳನ್ನು ಹೊಂದಿದರೂ, ಮೂಲರೂಪದ ಅಂಶಗಳಾದರೂ ಅಂಶ-ಅಂಶಿಯ ಭಾವ ಭೇದವಿರುವದಿಲ್ಲ. ಹೀಗಿರವುದು ಭಗವಂತನ ಅಚಿಂತ್ಯ ಶಕ್ತಿಯಿಂದಲೇ ಸಾಧ್ಯವೆಂದು ಶ್ರೀವಾದಿರಾಜರು ಧೃಢವಾಗಿ ಹೇಳುತ್ತಾರೆ.

**ಲೇಖಕ: ಹೆಬ್ಬಣಿ ಎಲ್. ಸುದರ್ಶನ**
**ರಾಘವೇಂದ್ರಕಾಲೋನಿ, ಚಾಮರಾಜಪೇಟೆ, ಬೆಂಗಳೂರು-18**

**ಶ್ರೀ ವಾದಿರಾಜರ ಗುಂಡಕ್ರಿಯೆಯ**
**ಒಂದು ಅಧ್ಯಯನ**

## ಭಕ್ತಿಯ ಉತ್ಕೃಷ್ಟ ಸಾಧನ

**ಕಳ್ಳ ಭಕ್ತರಿಗೆ ಸಲ್ಲದು ಶುಭಫಲ**
**ಎಲ್ಲ ಬೀಜಕೆ ಸಲ್ಲದು ಸಲ್ಲಿಕೆ**
**ಎಲ್ಲಿಯೋಗ್ಯತೆಯುಂಟೋ**
**ಅಲ್ಲಿಯೇ ಫಲ ಅದಿಲ್ಲದವರಿಗಿಲ್ಲ**
**ಬಲ್ಲಬುಧರು ಕೇಳಿರೋ**
**ಎಲ್ಲ ಸಾಧನೆಗಳೊಲ್ಲದವಗೆ ಈ**
**ಫಲದುರ್ಲಭಕಾಣಿರೋ**
**ಬಲ್ಲಿದ ಹಯವದನೊಲ್ಲಿದಾಗಲೇ ಅ**
**ಹಲ್ಯೆಯಿದ್ದ ಶಿಲೆ ಹೆಣ್ಣಾದ ವೋಲು ಇಂ-**
**ತುಳಿದದ್ದು ಹೆಣ್ಣಾಯಿತೇ||**

- ಶ್ರೀಹರಿದಾಸ ಭಾರತೀ ಗ್ರಂಥರತ್ನಮಾಲೆ (ಪುಟ 118)

ಯೋಗ್ಯ ಸಾಧನೆಯಿಂದ ಕೂಡಿದ ಹರಿಭಕ್ತಿಯು ಹರಿ ಪ್ರಸಾದಕ್ಕೆ ಕಾರಣವಾಗುತ್ತದೆ. ಹರಿ ಪ್ರಸಾದದಿಂದ ಮೋಕ್ಷ ಪ್ರಾಪ್ತಿ, ಶ್ರವಣ ಮನನ ಸರ್ವಸಾಧನೆಗಳು ಭಕ್ತಿಯುತವಾಗಿರಬೇಕು. ವಂಚಕತನದಿಂದ ಮಹತ್ವ ಪ್ರದರ್ಶನ ಮಾಡುವವರಿಗೆ ಅಧ್ಯಯನ ಅರ್ಚನಾದಿ ಸಾಧನೆಗಳು ಸಹಕಾರಿಯಾಗುವುದಿಲ್ಲ.

ತನ್ನ ಕುಲ, ರೂಪ, ವಿದ್ಯೆ, ಅಧ್ಯಯನ, ಕರ್ಮ, ದಕ್ಷತೆ, ತೇಜಸ್ಸು, ಅಧಿಕಾರ ಬಲ ಪೌರುಷ ವಿವೇಕ ಮೊದಲಾದ ಉಪಾಯಗಳು ಭಕ್ತಿ ರಹಿತವಾಗಿದ್ದರೆ ಶ್ರೀವಿಷ್ಣುವಿನ ಪ್ರಸನ್ನತೆಯನ್ನು ಪಡೆಯಲು ಸಾಧ್ಯವಿಲ್ಲ. ಭಕ್ತಿಯಿಂದ ಪ್ರಸನ್ನನಾಗಿ ಶ್ರೀಹರಿಯು ಗಜೇಂದ್ರ, ಅಂಬರೀಷ ಅಜಾಮಿಳ, ಮೊದಲಾದವರನ್ನು ರಕ್ಷಿಸಿದಂತೆ ಭಕ್ತಿಯುಕ್ತವಾದವರನ್ನು ಕಾಪಾಡುತ್ತಾನೆ.

ಶ್ರೀರಾಮಚಂದ್ರನ ಪ್ರಸನ್ನತೆಗೆ ಕಾರಣವಾಗಿ ಭಕ್ತಿಯಿಂದ ಮಾಡಿದ ಪತಿ ಗೌತಮರ ಸೇವೆಯು ಶಾಪನಿಮಿತ್ತದಿಂದ ಕಲ್ಲಾಗಿದ್ದ ಅಹಲ್ಯೆಯು ವಿಮೋಚಿತಳಾದಳು.

**ಲೇಖಕ: ಅರವಿಂದ ಬಿ. ಕಟ್ಟಿ**
**ಕಲಾವಿದ, ಶ್ರೀಬೆನಕ, 3ನೇ ಅಡ್ಡರಸ್ತೆ, ಪಿ.ಸಿ. ಎಕ್ಸ್‌ಟೆನ್‌ಷನ್, ಕೋಲಾರ.**



**ಶ್ರೀ ವಾದಿರಾಜರ ಗುಂಡಕ್ರಿಯೆಯ**
**ಒಂದು ಅಧ್ಯಯನ**

## ಒಂದೇ ಅಂಬುಧಿ-ಒಂದೇ ಕಡಗೋಲು-ನೇಣೊಂದೇ

ನಿರೀಶ್ವರ ಸಾಂಖ್ಯವಾದಿಗಳನ್ನು, ಐಕ್ಯವಾದಿಗಳನ್ನು ನಿರಾಕರಿಸಿ, ಮಧ್ವಮತದ ವೈಶಿಷ್ಟ್ಯವನ್ನು ತಿಳಿಸಿ ಕೊಡುವ ಗ್ರಂಥ **ಗುಂಡಕ್ರಿಯೆ.** ಇದು ಬಹ್ವರ್ಥಗರ್ಭಿತವಾಗಿ, ಪ್ರಮೇಯಭರಿತವಾಗಿ, ಗಂಧರ್ವರು ಮೆಚ್ಚುವಂತೆ ಸಂಗೀತಾತ್ಮಕವಾಗಿ ಪೂಜ್ಯ ಶ್ರೀವಾದಿರಾಜ ವಿರಚಿತ ಅಸಾಧಾರಣವಾದ ಒಂದು ಉತ್ಕೃಷ್ಟ ಗ್ರಂಥವಾಗಿದೆ. ಶ್ರೀಹರಿಯ ಒಲುಮೆ, ಜೀವನ ಯೋಗ್ಯತೆ ಬಗ್ಗೆ ಬರೆದಿರುವ ಕೆಲವು ನುಡಿಗಳನ್ನು ಇಲ್ಲಿ ಕೊಡಲಾಗಿದೆ.

**ಒಂದೇ ಅಂಬುಧಿ ಒಂದೇ ಕಡಗೋಲು ನೇಣೊಂದೇ**
**ಒಂದೇ ಸಾಧನ ಸರ್ವಸಾಧನಂಗಳು ಸರಿ**
**ಮುಂದೆ ಪರಿವ ದೈತ್ಯರ**
**ವೃಂದಕ್ಕೆ ಸುಧೆಯಿಲ್ಲ ವೃಂದಾರಕರಿಗುಂಟು**
**ಎಂದು ನಿರ್ಣೈಸಿತಾಗೆ**
**ಮುಂದಣ ಮುಕುತಿ ಯೋಗ್ಯರಿಗುಂಟು ಇತರರಿ**
**ಗೆಂದೆಂದಿಗಾಗದ್ಯೆಯ್ಯ**
**ತಂದೆ ಹಯವದನ ನೊಲ್ಲದ ವಾದಿಗೆ**
**ಸಂದೇಹಸಲ್ಲ ಬೂದಿಯ ಹೋಮದಂದದಿ**
**ಎಂದೆಂದಿಗಾಹುದ್ಯೆಯ**

ಒಂದೇ ಅಂಬುಧಿ, ಒಂದೇ ಕಡಗೋಲು, ಒಂದೇ ಪ್ರಯತ್ನವಿದ್ದರೂ, ದೇಶ ಕಾಲ ಒಂದೇ ಆದರೂ, ಶ್ರೀಹರಿಯ ಒಲುಮೆ ಪಡೆದ ದೇವತೆಗಳು ಮಾತ್ರ ಅಮೃತ ಪಾನಮಾಡಿದರು. ದೈತ್ಯರು ಹರಿದ್ವೇಷಿಗಳಾದ ಕಾರಣ ಅವರಿಗೆ ಅಮೃತ ಸಿಗಲಿಲ್ಲ. ಹಾಗೆ ಮುಂದಣ ಮುಕುತಿ(ಮೋಕ್ಷ) ಕೇವಲ ಯೋಗ್ಯ ಚೇತನರಿಗೆ (ಸಾತ್ವಿಕರಿಗೆ) ಹೊರತು ಮಿಕ್ಕವರಿಗಲ್ಲ, ದೈತ್ಯರು ಮಾಡುವ ಅನುಷ್ಠಾನ ಬೂದಿಯಲ್ಲಿ ಹಾಕಿದ ಆಹುತಿಯಂತೆ ಎಂದು ತಿಳಿಯಬೇಕು.

## ಗುಂಡಕ್ರಿಯೆ ಎಂದರೇನು? ಅದರಲ್ಲೇನಿದೆ?

ಶ್ರೀವಾದಿರಾಜರು ರಚಿಸಿದ ಸಂಸ್ಕೃತ, ಕನ್ನಡ, ತುಳು ಸತ್ಸಿದ್ಧಾಂತ ಗ್ರಂಥರಾಶಿಯನ್ನು ತೂಕಕ್ಕೆ ಹಾಕಿದರೆ ಅದು ಒಂದೆರಡು ಮಣ ಹಾಳೆಗಳಾಗಬಹುದು.

**ಗುಂಡಕ್ರಿಯೆ** ಎಂದರೆ ರುಬ್ಬುವ ಕೆಲಸವೆಂದರ್ಥ. ನಾವು ಚಟ್ನಿಯನ್ನು ರುಬ್ಬುವಾಗ ಕಡ್ಲೆಬೇಳೆ, ಕೊಬ್ಬರಿ, ಮೆಣಸಿನಕಾಯಿ, ಕೊತ್ತಂಬ್ರಿ ಉಪ್ಪು ಹೀಗೆ ಹಲವು ಬಗೆ ಪದಾರ್ಥಗಳನ್ನು ಹಾಕಿ ರುಬ್ಬುತ್ತೇವೆ. ಆದರೆ ಶ್ರೀವಾದಿರಾಜರು ಇಲ್ಲಿ ಇಪ್ಪತ್ತೊಂದು ಮತಗಳನ್ನು ಹುರಿದು ರುಬ್ಬಿ ಬಿಟ್ಟಿದ್ದಾರೆ. ಅದರಲ್ಲಿ ಮುಖ್ಯವಾಗಿ ಪರಬ್ರಹ್ಮನ ರೂಪಾಂತರಗಳಿಗೆ ಪರಸ್ಪರ ಭೇದವನ್ನು ಹೇಳಬಾರದು ಎಂಬುದು **ನೇಹನಾಸ್ತಿಕಿಂಚನ** ಎಂಬುದಕ್ಕೆ ಅರ್ಥವೇ ಹೊರತಾಗಿ ಜೀವ, ಜಡ ಪರಮಾತ್ಮರು ಭೇದರಹಿತರು ಎಂದರ್ಥವಲ್ಲ. ಮತ್ತು ಜೀವ-ಬ್ರಹ್ಮರು (ಜಡ ಸಹ)ಪರಸ್ಪರ ಅತ್ಯಂತ ಭಿನ್ನಸ್ವರೂಪರು ಎಂಬುದನ್ನು ಅಥರ್ವಣೋಪನಿಷತ್ತು ಸಾರುತ್ತದೆ. ಅನ್ಯ ಮತಗಳನ್ನು ದ್ವೇಷದಿಂದ ನಿರಾಕರಿಸುತ್ತಿಲ್ಲ. ಅವು ಸಹಜವಾಗಿಯೇ ನಿರಾಕರಣೆಗೆ ಯೋಗ್ಯವಾಗಿವೆ ಎಂಬುದನ್ನು ಈ ಎರಡು ಪದ್ಯಗಳಿಂದ ಶ್ರೀ ಗುರುರಾಜರು ಕಣ್ತೆರೆಸಿರುತ್ತಾರೆ.

**ನೇಹನಾಸ್ತಿಕಿಂಚನವೆಂಬ ಶೃತಿ ನಮ್ಮ। ಶ್ರೀಹರಿಯಲ್ಲಿ ಸ್ವಗುಣರೂಪಂಗಳವ್ಯೋಯಕ್ಕೆ ಭೇದವಿಲ್ಲ।। ಸಾಹಸ ಸತ್ವ ನಿತ್ಯತ್ವ ಮಹತ್ವ। ವೆಲ್ಲವುಸಮವೆಂದು। ಊಹಿಸಿ ಏಕ ಮೇವಾದ್ವಿತೀಯಂ। ಎಂಬೀಹಾಡುಲಯಕಾಲದಿ। ಈ ಹದಿನಾಲ್ಕು ಲೋಕವಿಲ್ಲೆಂದ್ಯೆಸೆ। ಮೋಹವ ಬಿಡುಹಯವದನ ಮಾಡುವ ಜಗದಹಾನಿ (ಲಯ) ಯಾತರಿಂದ।। 15।।**

**ಅನ್ಯಮೀಶಮೆಂಬೂ ಶೃತಿಯ ಕೇಳುದ್ವಾಸು। ಪರ್ಣಸಮುಚಿಸಹವೆಂಬ ವೇದವನಂಬು। ನಿನ್ನ ಬೆನ್ನಬಿಡದಿಹ। ಅನ್ನೇಕ ಜನ್ಮವ ಕ್ಲೇಶದ ನೋಡು ಇ। ಇನ್ನನ್ಯವೆಂದರೆ ಪುಸಿಯೆ ಅನ್ನಶನ್ನೊೖೀಎನಿಪ ಮುಕುಂದನು। ಪೂರ್ಣ ಸುಖನಲ್ಲವೆ ಮಾನ್ಯ ಹಯವದನನ್ನ ತ್ರಿವಿಕ್ರಮನನ್ನು ದಾಸೋಹಂ ಎನ್ನೋ ಶಾಸ್ತ್ರೋಕ್ತಿ। ಮನ್ನಿಸಿ ಬಾಳೋಜೀವ।। 16।।**

**ಲೇಖಕ: ಬಿ. ಸತ್ಯನಾರಾಯಣಾಚಾರ್**
**ನಂ. 58, ಆರ್.ಟಿ. ನಗರ, ಬೆಂಗಳೂರು 24**





## ಭಕ್ತಿ ಪಂಥದ ಸಿರಿ - ಗುಂಡಕ್ರಿಯೆ

**ಎನಗೆ ನಿನ್ನಲ್ಲಿ ಭಕ್ತಿ ಇರಲಿ ಇಲ್ಲದಿರಲಿ**
**ಜನ ಹರಿಭಕ್ತನೆಂದೆನ್ನ ಕರೆಯಲಾಗಿ ಮನ ಪಾಪಕೆರಗದಂತೆ।।**

ಜಗದಾದಿ ಕಿಂಕರನು, ಹರಿಭಕ್ತನು, ಹರಿದಾಸನು ಎಂದು ಒಬ್ಬನನ್ನು ಗೌರವಿಸಲು ಹರಿಪ್ರೀತಿಯೇ ಕಾರಣ ಎಂದು ಈ ಪದ್ಯದಲ್ಲಿ ತಿಳಿಸಿದ್ದಾರೆ. ಶ್ರೀಹರಿಯು ಸರ್ವ ಸುಜೀವರಲ್ಲಿರುವನೆಂದು ಈ ಶೃತಿಗಳಿಂದ ಗೋಚರವಾಗುತ್ತದೆ. **ದ್ವಾಸುಪರ್ಣಾ...** ಎಂಬ ಶೃತಿಯು ಜೀವ-ಪರಮಾತ್ಮರೆಂಬ ಎರಡು ಪಕ್ಷಿಗಳು ಅನಾದಿಕಾಲದಿಂದ ಒಟ್ಟಿಗೆ ಇರುವ ಸಖರು ಎಂದು ಭಾಗವತವು ತಿಳಿಸುತ್ತದೆ.

ಶ್ರೀಹರಿಯು ಸಹೃದಯನು. ಯೋಗ್ಯ ಜೀವರುಗಳಿಗೆ ಮಾತ್ರ ಯೋಗ್ಯಸಾಧನೆಗಳಲ್ಲಿ ತೊಡಗಿಸಿ ಅಲ್ಪ ಯತ್ನದಿಂದ ಮಹಾ ಫಲವನ್ನು ಕೊಡಿಸುತ್ತಾನೆ. ರಕ್ಷಕನಾಗಿಯೂ ಇರುತ್ತಾನೆ. ಫಲವನ್ನು ನೀಡುವಾಗ ನಿಮಿತ್ತ (ಕಾರಣ)ವೆಂಬುದು ಸಾಮಾನ್ಯ ನಿಯಮ. ಉತ್ತಮಾಧಿಕಾರಿಗಳಿಗೆ ಈ ನಿಮಿತ್ತ ಕಾರಣವು ನಿತ್ಯವಾದುದಲ್ಲ. ಉತ್ತಮಾಧಿಕಾರಿಗಳಿಗೆ ಸ್ವರೂಪಯೋಗ್ಯತೆ ಸ್ವಾಭಾವಿಕವಾದ ನಿರಂತರ ಸ್ಮರಣೆಗಳೇ ನಿಮಿತ್ತವಾದವುಗಳು. ಕೆಲವೊಮ್ಮೆ ಉತ್ತಮರು ಮನುಷ್ಯದೇಹಗಳಲ್ಲಿ ಕಾಣಿಸಿಕೊಳ್ಳುವುದುಂಟು ಮತ್ತೆ ಕೆಲವರು ಸದುಪಯೋಗಪಡಿಸಿಕೊಳ್ಳದೇ ನೀಚ ಯೋನಿಗಳನ್ನು ಹೊಂದುವವರು ಇದ್ದಾರೆ. ಆದರೆ ಮುಕ್ತಿ ಯೋಗ್ಯರಾರಿಗೂ ಪ್ರಸಿದ್ಧ ಯಮಲೋಕ ನರಕ ವಾಸವು ಇರುವದಿಲ್ಲ.

ಭಗವಂತನ ಗುಣವನ್ನು ತಿಳಿಸುವ ನಾಮಗಳು ಯಾರ ನಾಲಿಗೆಯಲ್ಲಿ ಒಮ್ಮೆಯೂ ಇರುವದಿಲ್ಲವೋ, ಯಾರ ಶಿರಸ್ಸು ಶ್ರೀಹರಿಯ ಪಾದ-ಕಮಲಗಳಿಗೆ ಬಾಗುವದಿಲ್ಲವೋ, ಕರಣಗಳು ಒಮ್ಮೆಯಾದರೂ ನಮಸ್ಕರಿಸುವುದಿಲ್ಲವೋ ಅಂತಹವರನ್ನು ಯಮಪಟ್ಟಣವು ಆಹ್ವಾನಿಸುತ್ತದೆ. ಭಕ್ತರಿಂದ ಮಾಡುವ ಸಂಕೀರ್ತನೆಯು ಫಲಪ್ರದವಾಗುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ಸಂಸಾರಿಯು, ಮುಕ್ತಿ ಯೋಗ್ಯರು ಎಲ್ಲ ಸಮಯದಲ್ಲೂ ಭಕ್ತಿಯನ್ನು ಮಾಡುವರೆಂಬ ನಿಯಮವಿಲ್ಲ.ಅನಾದಿ ಕರ್ಮದಿಂದ ಸುಜೀವಿಯು ಮಾರ್ಗತಪ್ಪಬಹುದು. ಶ್ರೀಹರಿಯು ಇಂತಹವರನ್ನು ದಂಡಿಸಿ ಸನ್ಮಾರ್ಗಕ್ಕೆ ತಂದು ಎಚ್ಚರಿಸುತ್ತಾನೆ. ಇದು ಅವನ ನಿಯಮ. ಆದ್ದರಿಂದ ಭಕ್ತನು ತಪ್ಪು ಮಾಡುವದಿಲ್ಲ. ತಪ್ಪು ಮಾಡಿದರೂ ಪರಮಾತ್ಮನು ಶಿಕ್ಷೆಯನ್ನು ನೀಡಿ ಸರಿಯಾದದಾರಿಯಲ್ಲಿ ಕೊಂಡೊಯ್ಯುವನು.

**ಲೇಖಕಿ: ಶ್ರೀಮತಿ ಭಾನುಪ್ರಭಾ**
**ಮಾಗೇರಿ ಪ್ರಸನ್ನ ಶ್ರೀನಿವಾಸ ಭಜನಾಮಂಡಳಿ, ಕತ್ತರಿಗುಪ್ಪೆ, ಬೆಂಗಳೂರು-85.**

## ಹಯವದನನೊಲಿಸುವ ಗುಂಡಕ್ರಿಯೆ

ಗುಂಡಕ್ರಿಯೆಯ ಮುಖ್ಯ ಉದ್ದೇಶ ಅನ್ಯಮತ ಖಂಡನೆಯೇ ಆಗಿದೆ. ಗುಂಡಕ್ರಿಯಾ ಇದು ಒಂದು ರಾಗವೂ ಹೌದು. ಇದು ಜನ್ಯ ರಾಗವಾಗಿದ್ದು ಈ ರಾಗಾಲಾಪನೆಯು ಕೇಳಲು ಬಹಳ ಇಂಪಾಗಿದ್ದು ಅರಸಿಕರನ್ನೂ ತಲೆತೂಗುವಂತೆ ಮಾಡುತ್ತದೆ. ಈ ಗುಂಡಕ್ರಿಯಾರಾಗವು ಗಂಧರ್ವಲೋಕದಲ್ಲಿ ಪ್ರಸಿದ್ಧಿಯಾಗಿದೆ. ಮನುಷ್ಯ ಲೋಕದಲ್ಲಿ ಇಲ್ಲ. ಇದರಲ್ಲಿ ಇನ್ನೊಂದು ಶ್ರೇಷ್ಠತೆ ಇದೆ. ಎಲ್ಲ ದೇವರನಾಮಗಳಲ್ಲೂ ಕೊನೆಯ ನುಡಿಯಲ್ಲಿ ಅಂಕಿತವಿರುತ್ತದೆ. ಗುಂಡಕ್ರಿಯೆಯಲ್ಲಿ ಪ್ರತಿ ಪದ್ಯದಲ್ಲೂ **ಹಯವದನ** ಅಂಕಿತ ಇರುವುದು ಇನ್ನೂ ವಿಶೇಷ. ಅನ್ಯಮತ ಖಂಡನೆಯಲ್ಲಿ ಒಂದು ಪದ್ಯದಲ್ಲಿ ವಾದಿರಾಜರು ಹೀಗೆ ತಿಳಿಸಿಕೊಟ್ಟಿದ್ದಾರೆ –

**ನೀ ನಾಯಿ ಎಂದರೆ ಕೋಪವೇಕೊ ಮನುಜ।**
**ಹೀನರೈಕ್ಯವ ಪೇಳಲದು ಬೈಗಳಾದರೆ। ಮನೆಮನೆಗಳಿಗೆ ಪೋಗಿ ।**
**ದೀನತನವ ತೋರಿತನುವ ಪೊರೆಯುವ ।**
**ನಾನಾ ಜೀವರೈಕ್ಯವ। ಶ್ರೀನಾಥಗೆ ಪೇಳ್ವುದೇಸು ಬೈಗುಳೊ ಮೂಢ ।**
**ಗುಣಶೂನ್ಯನೆಂಬುದು । ಮಾನವರಿಗೆ ಬೈಗುಳಾದರೆ ।**
**ಹಯವದನಗೆ ಗುಣವಿಲ್ಲೆಂಬೋದು । ಬೈಗಳಲ್ಲೇನೊ ಮೂಢ**

ಎಂದು ಕೇಳುತ್ತಾರೆ. ನಿನ್ನನ್ನು ನಾಯಿ ಎಂದರೆ ನಿನಗೆ ಕೋಪ ಬರುತ್ತದೆ. ಹಾಗಿರುವಾಗ ನೀನು ನಾನು ಒಂದೇ ಎಂದು ಐಕ್ಯ ಹೇಳುವುದು, ನಿರ್ಗುಣ ಎನ್ನುವುದು, ಹೀಗೆ ಮಾಡಿದರೆ **ಹಯವದನ**ನಿಗೆ ಕೋಪ ಬರುವುದಿಲ್ಲವೇ ಇಂಥ ನೀಚ ಉಪಾಸನೆ ಬೇಡ ಎನ್ನುತ್ತಾರೆ.

**ಅಹಂ ಬ್ರಹ್ಮಾಸ್ಮಿ–** ಇದು ಎಷ್ಟು ಹಾಸ್ಯಕರ! ರಾಜನೆದುರಿನಲ್ಲಿ ನಾನೇ ರಾಜ ಎಂದು ಹೇಳಿಕೊಂಡರೆ ಅವನು ನಿನಗೆ ಗಲ್ಲು ಶಿಕ್ಷೆಯನ್ನೇ ವಿಧಿಸುತ್ತಾನೆ. ಹೀಗಿರುವಾಗ ನೀನು, ನಾನೇ ಪರಮಾತ್ಮ ಎಂದು ಹೇಳಿಕೊಂಡರೆ ನಿನ್ನನ್ನು ಅಂಧಂತಮಸ್ಸಿನಲ್ಲೇ ಹಾಕಿಬಿಡುತ್ತಾನೆ. ದಾಸೋಹಂ ಎನ್ನು. **ನಾನು ದಾಸ, ನೀನು ಈಶ,** ಇದೇ ಉಪಾಸನೆ ನಿರಂತರವಾಗಿದ್ದರೆ **ಹಯವದನ** ನಿನ್ನನ್ನು ಕೈಕೊಟ್ಟು ಕರೆದುಕೊಳ್ಳುತ್ತಾನೆ. ಬಿಡದೆ ರಕ್ಷಿಸುತ್ತಾನೆ.

**ಲೇಖಕಿ: ಕುಮುದಾಬಾಯಿ**
**2359/3ಅ, 10ನೇ ಕ್ರಾಸ್, ಬಸವೇಶ್ವರ ರಸ್ತೆ, ಮೈಸೂರು.**





**ನಾ ನಿನ್ನ ಮರೆತರೂ ನೀನೆನ್ನ ಮರೆತರೆ ಹಾನಿ ನಿನಗೆ**
**ನಿನ್ನ ಭಕ್ತವತ್ಸಲತೆಗೆ ಹೀನತೆ ಬಂದಿತಾಗಿ**
**ಆನ ಋತೇ ತ್ವತ್ಕ್ರಿಯತೇ ಕಿಂಚನಾರೇ ಎಂಬ ಮಾನ ಏನಂದಿತಾಗಿ**
**ಶ್ರೀನಾಥ ಹಯವದನ ಶಿಶುಗಳ ತಪ್ಪನ್ನು ಜನನಿ ಜರಿದರೆ**
**ಜಗವೆಲ್ಲ ನಗುವರೋ ಜಾಣರ ಜಾಣ ನೀನು.**

ನಾನು ಮರೆತೆನೆಂದು ನೀನು ಉದಾಸೀನ ಮಾಡಿದರೆ ನಿನ್ನ ಕೀರ್ತಿಗೆ ಹೀನತೆ ಬರುತ್ತದೆ. ನೀನೆ ಸರ್ವ ಕರ್ತನೆಂದು ಶ್ರುತಿ ಪ್ರಮಾಣ ಉಂಟು. ನೀನು ಸಜ್ಜನರ (ಭಕ್ತರ) ಉಪೇಕ್ಷೆ ಮಾಡಿದರೆ ದುರ್ಜನರು ಅವರನ್ನು ಕೊಂದುಬಿಡುತ್ತಾರೆ. ಕೊಲ್ಲುವವನು ಮತ್ತು ಕಾಯುವವನು ಎಲ್ಲವೂ ನೀನೆ. ಆದರೆ ಮಕ್ಕಳ ತಪ್ಪನ್ನು ತಾಯಿ ಮನ್ನಿಸದಿದ್ದರೆ ಜನರು ನಗುವರು. ಅದರಂತೆ ನಮ್ಮೆಲ್ಲರ ತಾಯಿಯಾದ ನೀನು ನಮ್ಮ ತಪ್ಪನ್ನು ಮನ್ನಿಸಿ ಕೈ ಹಿಡಿದು ಕಾಪಾಡದಿದ್ದರೆ ಜಗತ್ತು ನಗುತ್ತದೆ. ಆದ್ದರಿಂದ ಜಾಣರ ಜಾಣನಾದ **ಹಯವದನನ** ಭಕ್ತರ ತಪ್ಪುಗಳನ್ನೆಲ್ಲಾ ಮನ್ನಿಸಿ ಕಾಪಾಡು. ಶ್ರೀಹರಿಯೇ ನಮ್ಮ ತಂದೆ, ತಾಯಿ, ಬಂಧು ಬಳಗ, ಮಿತ್ರ ಒಡೆಯ ಎಲ್ಲ ಅವನೇ ಎಂದು ವಾದಿರಾಜರು ಒತ್ತಿ ನುಡಿದಿದ್ದಾರೆ.

**ಹಿರಿಯ ವರ ಬಲದಿ ಮೆರೆವ ಮಕ್ಕಳ ಮಾಡೋ।**
**ಪರಮಾಪರಾಧವ ಸ್ಮರಿಸುವರೇನವರು॥**
**ಧರೆಯೊಳು ಎಲ್ಲರಿಗ್ಹಿರಿಯನೆ ನಾನಿನ್ನ**
**ಮರೆತರು ನೀ ಎನ್ನ ಮರೆಯಲಿ ಬೇಡೋ॥**
**ಸ್ಮರಣೆ ಇಲ್ಲದೇ ನಾ ಸ್ಮರಿಸಿ ವಿಷಯಂಗಳ**
**ಮರೆತು ನಿನ್ನಡಿಗಳ ಮರುಗುವೆ ಮನದೊಳು।**
**ವರದಾನಂತಾದ್ರೀಶ ದೊರೆಯೆ ಎಂದೆಂದಿಗೂ**
**ಮರೆಯದಂಥಾವರ ತ್ವರಿತದಲಿ ನೀಡೋ** ಎಂದು ಪ್ರಾರ್ಥಿಸಿದರೆ.

ಭಕ್ತವತ್ಸಲನೆಂಬೊ ಬಿರುದು ಪೊತ್ತ ಮೇಲೆ ಭಕ್ತರಾಧೀನ ನಾಗಿರಬೇಡವೇ? ಎಂದು ಘಟ್ಟಿಸಿ ಕೇಳಿ **ಕರುಣಾಕರನೆಂಬೊ ಬಿರುದು ಬೇಕಾದರೆ ಸರ ಸರ ಬಾರಯ್ಯ** ಎಂದು ಸವಾಲನ್ನೇ ಒಡ್ಡಿದ ಹರಿದಾಸರೂ ಇದ್ದಾರೆ.

**ಲೇಖಕಿ: ಡಾ॥ ಎನ್.ಜಿ. ವಿಜಯಲಕ್ಷ್ಮಿ ರಾಘವೇಂದ್ರಾಚಾರ್ಯ**
**ನಂ. 333, 13ನೇ ಮುಖ್ಯರಸ್ತೆ, ಗೋಕುಲಬಡಾವಣೆ, ಬೆಂಗಳೂರು-54**

## ಈಷಣ ತ್ರಯ ದೂರ ಹಯವದನನ ಕಾರುಣ್ಯ

**ರುದ್ರ ರೋಧನವೆಂಬ ಹೊನ್ನ, ಗಂಡನ ಕಾಯ**
**ದರ್ಧವ ಸೆಳೆವ ಹೆಣ್ಣ, ನೊಬ್ಬಬ್ಬರ**
**ಗುದ್ದಿಸಿ ಕೊಲ್ವ ಮಣ್ಣ ತೊ**
**ರರ್ದು ಬಾಳುವ ಮಾನವ ನಾದ ಚ-**
**ತುರ್ದಶ ಭುವನ ದೊಳು**
**ಹೊದ್ದದೆ ದುಗ್ಧ ವಾರಿಧಿ ಮಧ್ಯದಲ್ಲಿ**
**ಇದ್ದು ತನ್ನುದರದಲ್ಲಿಪ್ಪ**
**ಪದ್ಮಿನಿಯ ಸಡ್ಡೆ ಗೊಳ್ಳದೆ ಕುವರನ ನಾಭಿ-**
**ಪದ್ಮದಿ ಪೆತ್ತ ಹಯವದನ ನೊಬ್ಬನೇ**
**ಗೆದ್ದ ಸಿದ್ಧ ಕಾಣಿರೋ॥**

ಭಯಂಕರ ರೋದನಕ್ಕೆ ಕಾರಣವಾದ ಹೊನ್ನು. ಶರೀರದ ಅರ್ಧಾಂಗಿ ಎನಿಸಿ ಸೆಳೆವ ಹೆಣ್ಣು ಮತ್ತು ಒಬ್ಬೊಬ್ಬರನ್ನೂ ಗುದ್ದಿಸಿ ಕೊಲ್ಲುವ ಮಣ್ಣು. ಈ ಮೂರನ್ನೂ ಜಯಿಸಿ ಬಾಳಬಲ್ಲವನು ಈ ಹದಿನಾಲ್ಕು ಲೋಕಗಳಲ್ಲಿ ಯಾರೂ ಇಲ್ಲ. ಇದನ್ನೇ ಪುರಂದರದಾಸರು- **ಆರು ಹಿತವರು ನಿನಗೆ ಈ ಮೂವರೊಳಗೆ ನಾರಿಯೋ, ಧಾರುಣಿಯೋ, ಬಲುಧನದ ಸಿರಿಯೋ** ಎಂದಿದ್ದಾರೆ. ಇವುಗಳ ಮೋಹಕ್ಕೆ ಒಳಗಾದವನು ಸಂಸಾರ ಚಕ್ರದಲ್ಲಿ ಸುತ್ತುತ್ತಲೇ ಇರುತ್ತಾನೆ. ಆದರೆ ಈ ಈಷಣ ತ್ರಯದಿಂದ ಮುಕ್ತನಾಗಿರುವವನು ಶ್ರೀಹರಿಯೊಬ್ಬನೇ. ಮಣ್ಣಿನ ಆಸೆ ತೊರೆದು ಕ್ಷೀರ ಸಾಗರದ ಮಧ್ಯದಲ್ಲಿ ವಾಸವಾಗಿದ್ದಾನೆ. ಪತ್ನಿ ಮಹಾಲಕ್ಷ್ಮಿ ಆತನನ್ನು ಆಕರ್ಷಿಸಲಾರಳು. ಶ್ರೀಹರಿಯು ಲೀಲೆಯಿಂದಲೂ ಮತ್ತು ಆಕೆಯನ್ನು ಅನುಗ್ರಹಿಸಬೇಕೆಂಬ ಇಚ್ಛೆಯಿಂದ ರಮೆಯೊಂದಿಗೆ ಆಕೆಯಲ್ಲಿರುವ ತನ್ನ ಸ್ತ್ರೀರೂಪದೊಂದಿಗೇ ರಮಿಸುತ್ತಾನೆ. ಅನ್ಯರಿಂದ ಶ್ರೀಹರಿಗೆ ರತಿ ಎಂಬುದಿಲ್ಲ ಎಂಬುದಾಗಿ ವಾದಿರಾಜರು ಶ್ರೀಹರಿಯ ಸ್ತ್ರೀರಮಣತ್ವವನ್ನು ನಿರೂಪಿಸಿದ್ದಾರೆ. ಸಂತಾನ ಪಡೆಯಲೂ ಸಹ ತನಗೆ ಲಕ್ಷ್ಮೀದೇವಿಯ ಅವಶ್ಯಕತೆ ಇಲ್ಲೆಂದು ನಾಭಿಕಮಲದಿಂದಲೇ ಚತುರ್ಮುಖ ಬ್ರಹ್ಮನನ್ನು ಪುತ್ರನನ್ನಾಗಿ ಪಡೆದಿದ್ದಾನೆ.

ಕೊನೆಯ ಪದ್ಯದಲ್ಲಿ ರಾಜರು ಹೇಳುತ್ತಾರೆ-





## ನದ್ವಿತಿಯೋಽಸ್ತಿ ಕಶ್ಚಿತ್ - ಸದೃಶ

ಆರು ಶಾಸ್ತ್ರಗಳ ಬಲ್ಲವರೆಲ್ಲಾ ಕೇಳಿರೋ
ನಾರಾಯಣನ ನಾರಿಯರಾದ ಧಾರುಣಿ
ಸಿರಿದೇವಿಯರಿವಿನ
ದೂರಿದಾಗಲೇ ನಿನಗೆ ದೂರವಾಗಲು ಕಾಲ

**- ಗುಂಡ ಕ್ರಿಯೆಯ 29ನೆ ಪದ್ಯ**

ವೇದದ ಅಂಗಗಳಾದ ಷಟ್ ಶಾಸ್ತ್ರ-ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, **ಕಲ್ಪ ಜ್ಯೋತಿಷ್ಯ** ಇವಗಳನ್ನು ತಿಳಿದ ಪಂಡಿತರೂ ಸಹ ಶಬ್ದ ಶಾಸ್ತ್ರಗಳಲ್ಲಿ ಮುಳಗಿದರೆ ಸಾಲದು. ಶಬ್ದವೇ ಜ್ಞಾನವಲ್ಲ. ವೇದಪ್ರತಿಪಾದ್ಯನ ಉಪಾಸನೆ ಯಾರೂ ಬಿಡುವ ಹಾಗಿಲ್ಲ. ಭೂಮಿಯಲ್ಲಿ ಬದುಕಿರುವ ಪ್ರತಿಯೊಬ್ಬನೂ ಮೇದಿನೀಪತಿ (ಧಾರುಣಿ ಸಿರಿದೇವಿಯರಸನ)ಯ ಉಪಾಸನೆ ಮಾಡಲೇಬೇಕು. ಸೂಕರ ರೂಪನಾದ ಶ್ರೀಹರಿಯ ಆಶ್ರಯದಲ್ಲಿ ಬದುಕುತ್ತಿರುವವರೆಲ್ಲರೂ ಸಹ ಭಗವಂತನಲ್ಲಿ ಬುದ್ಧಿ, ವಿಷಯವೈರಾಗ್ಯ ಹೋಂದಲಿಲ್ಲ ಅಂದರೆ ಅದು ನಿಷ್ಪ್ರಯೋಜಕವು. ಹರಿಸ್ತುತಿಯಿಂದಲೇ ನಮ್ಮ ವಚನ ಶುದ್ಧಿಯಾಗುವುದು.

ವಾದಿರಾಜರ ಕೃತಿ ಹಯಗ್ರೀವ ಪ್ರಾರ್ಥನಾದಶಕ ಸ್ತೋತ್ರದಲ್ಲಿ ಹೇಳಿದಹಾಗೆ

**ದುರ್ವಾರ್ತಾ ದುಷ್ಟಶಬ್ದೇಭ್ಯೋ ನಿವರ್ತಯ ಹರೇಸ್ತುಮೇ॥ 6॥**

ಭಗವಂತನ ಅನುಗ್ರಹದಿಂದಲೇ ಎಲ್ಲವೂ ನಮಗೆ ಲಭಿಸುತ್ತಿರುವುದು. ಸಕಲ ಸನ್ಯಾಸಿಗಳೂ ಸಹ ಅನುಸಂಧಾನ ಪೂರ್ವಕ ನಾರಾಯಣನ ಸ್ಮರಣೆ ಮಾಡುತ್ತಾ ನಮಗೆಲ್ಲ ಅನುಗ್ರಹಿಸುವುದನ್ನು ಕಾಣುತ್ತಿದ್ದೇವೆ. (ವಾಸುದೇವಾಶ್ರಯೋ ಮರ್ತ್ಯೋ ವಾಸುದೇವ ಪರಾಯಣಃ) **ನಾರಾಯಣನ ನೆನೆ ಮನವೇ ನಾರಾಯಣ ನೆನೆ** ಎನ್ನುವ ದಾಸವಾಣಿಯಂತೆ.

**ಬ್ರಹ್ಮಸೂತ್ರ**ದಲ್ಲಿರುವ ಅಧಿಕರಣಗಳಂತೆ ಪ್ರಮೇಯ ಭರಿತವೂ ಆದ ಗುಂಡ ಕ್ರಿಯೆಯ ಎಲ್ಲ ಶ್ಲೋಕಗಳೂ ಸಹ ನಾವೆಲ್ಲ ಹಯವದನನ ಪಾದ ಸರೋಜವನ್ನೆ ಸಾರಲು ಬರೆದಿರುವ ಕೃತಿಯು **ಲಾತವ್ಯನಾಮಕರಾದ ವಾದಿರಾಜರು** ರಚಿಸಿದ್ದಾರೆ. **ಹಯವದನನಿಂದಲೆ ರಕ್ಷಿಪ ನಾವು ಸಾಮಗಾನ** ಪ್ರಿಯನಾದ ಶ್ರೀಹರಿಯ ಉಪಾಸನೆಯನ್ನು ವಿವೇಕಿಗಳಾದ ನಾವೆಲ್ಲ ಅನುಸರಿಸತಕ್ಕದ್ದು. **ನಾನ್ಯಃ ಪಂಥ**ವೆಂಬಾ ಮತವೇ ಮೋಕ್ಷಕ್ಕೆ ದಾರಿ. ಬೇರೆ ಮಾರ್ಗವೇ ಇಲ್ಲ.

**ಲೇಖಕ: ನಾರಾಯಣ ಬಳ್ಳಾರಿ (ಹೊಸರಿತ್ತಿ)**
**29/ಎ, ಮಾರುತಿನಗರ, ಬೆಮೆಲನಗರ ಅಂಚೆ, ಕೋಲಾರ ಜಿಲ್ಲೆ**

## ಗುಂಡಕ್ರಿಯೆಯ ಚಿಂತನಧಾರೆ

**ಗುಂಡಕ್ರಿಯೆ** ಎಂಬುದು ಮಧ್ವಮತಸ್ಥಾಪನೆ, ಅನ್ಯಮತ ನಿರಾಕರಣೆಯ ವಸ್ತುಗಳನ್ನು ಒಳಗೊಂಡ ಗೇಯ ಪ್ರಕಾರವಾಗಿದೆ. ಅಜ್ಞಾನ, ಅನ್ಯಥಾಜ್ಞಾನ, ಮಿಥ್ಯಾಜ್ಞಾನಗಳ ನಿವಾರಣೆಯೆ ಈ ಕೃತಿಯ ಫಲಶೃತಿಯಾಗಿದೆ. ಕನ್ನಡ ಸಾಹಿತ್ಯದ ಶತಕ ಪ್ರಕಾರದಂತೆ ಪ್ರತಿನುಡಿಯ ಕೊನೆಯಲ್ಲಿ ಅಂಕಿತ ಪುನರಾವರ್ತನೆಗೊಳ್ಳುತ್ತದೆ. ಪ್ರಸ್ತುತ ಒಂದು ನುಡಿಯನ್ನು ಮಾತ್ರ ಕುರಿತಂತೆ ಅವಲೋಕಿಸಿದ್ದೇನೆ.

**ಹೊಟ್ಟೆಯೆಂಬ ಪೊನ್ನ ತೊಟ್ಟಿಲೊಳಗಿಟ್ಟು ವಿಠ್ಠಲ ಜೀವರ**
**ನಿದ್ರೆಗೊಳಿಸುವನು ಸೃಷ್ಟಿಕಾಲ ಬಂದಾಗ**
**ಹುಟ್ಟಿಸಿ ಬಹುರೂಪದಾಟವನಾಡಿಸಿ ಇಷ್ಟಂಗಳ ಕೊಡುವ**
**ದುಷ್ಟ ಮಕ್ಕಳ ಮಂಡೆ ಹೆಟ್ಟುವ, ಕೆಲವರ ಕಟ್ಟಲೆಯನ್ನು ಬಿಡಿಸ**
**ಶಿಷ್ಟರೆತ್ತಿಕೊಂಬ, ಹಯವದನನ ಪಾದದ ಬಿಟ್ಟಿಯ ಕಾಂಬಂತೆ**
**ಕಾಣದೆ ಮನಮುಟ್ಟಿ ಭಜಿಸೋ ಜೀವ॥**

ಶ್ರೀವಾದಿರಾಜರು ಈ ನುಡಿಯಲ್ಲಿ ಅಸೃಜ್ಯಾನಿದ್ರಾವಸ್ಥೆಯಲ್ಲಿರುವ ಜೀವನ ವಿಚಾರವನ್ನು ವಿವರಿಸಿದ್ದಾರೆ. ಪ್ರಲಯ ಕಾಲದಲ್ಲಿ ಎಲ್ಲವೂ ಜಲಮಯವಾದಾಗ, ಬ್ರಹ್ಮಾಂಡವೆಲ್ಲವನ್ನೂ ಶ್ರೀಹರಿಯು ತನ್ನ ಉದರದಲ್ಲಿ ಧರಿಸುತ್ತಾನೆ. ಈ ಸನ್ನಿವೇಶವನ್ನು ಶ್ರೀ ವಾದಿರಾಜರು ತೊಟ್ಟಿಲು ಮತ್ತು ಕೂಸಿನ ದೃಷ್ಟಾಂತದೊಡನೆ ಹೇಳುತ್ತಾರೆ. ಪರಮಾತ್ಮನ ಉದರವೇ ತೊಟ್ಟಿಲು. ಇದರಲ್ಲಿ ಮಲಗುವ ಜೀವರಾಶಿಗಳೆಲ್ಲ ಅಸಂಖ್ಯಕೂಸುಗಳು. ಈ ದೇವನ ತೊಟ್ಟಿಲೆಂಬ ಹೊಟ್ಟೆ ಹೊನ್ನಮಯವಾದುದು. ಜ್ಞಾನಾನಂದಮಯವಾದ, ಅಪ್ರಾಕೃತನಾದ, ಕೋಟಿಸೂರ್ಯನ ಪ್ರಕಾಶವನ್ನು ಮೀರಿ ರಾರಾಜಿಸುವ ಪರಮಾತ್ಮನ ಉದರದ ಚಿಂತನೆ, ಸ್ಮರಣೆಗೆ ಒದಗಬೇಕು. ಸಮಸ್ತ ಜೀವರಾಶಿಗಳು ಶ್ರೀಹರಿಯ ಉದರದಲ್ಲಿ ಕಂಪನದ ಅವಸ್ಥೆಯಲ್ಲಿ ಇರುತ್ತವೆ ಎನ್ನಲಾಗುತ್ತದೆ. ಇಂತಹ ಅವಸ್ಥೆಯಲ್ಲಿ ಅಂದರೆ ಪರಮಾತ್ಮನ ಉದರದಲ್ಲಿರುವಾಗ ಮಾತ್ರ ಜೀವಿಗಳಿಗೆ ಕರ್ಮಲೇಪವಿಲ್ಲ ಎನ್ನಲಾಗುತ್ತದೆ.





## ಶ್ರೀ ವಾದಿರಾಜರ ಕೃತಿಗಳಲ್ಲಿ ಚಾರ್ವಾಕ ಮತದ ಖಂಡನೆ

ಶ್ರೀವಾದಿರಾಜತೀರ್ಥರು ದಾಸಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ ಮಹಾಮಹಿಮರು. ಎಲ್ಲ ಪದ್ಯಗಳು ಸ್ವತಂತ್ರ ಗ್ರಂಥದಂತೆ ಬ್ರಹ್ಮಸೂತ್ರಗಳಲ್ಲಿರುವ ಅಧಿಕರಣಗಳಂತೆ ತತ್ವಭರಿತವಾಗಿವೆ ಎಂದು ಹೇಳಬಹುದಾಗಿದೆ. ದುರ್ಮತಗಳ ನಿರಾಕರಣೆ ಎಂಬುದಾಗಿ ತಿಳಿದುಕೊಳ್ಳಬಹುದು. ಇಲ್ಲಿ ಚಾರ್ವಾಕ ಮತವನ್ನು ನಿರಾಕರಿಸುವ ಸಾಲುಗಳನ್ನು ತಿಳಿಸಲಾಗಿದೆ.

**ದೇಹವಿಲ್ಲದೆ ಬೇರೆ ಜೀವವಿಲ್ಲೆಂಬನೆ**
**ಮೋಹದ ನಿನ್ನ ಹೆಂಡತಿ ಸಾಯಲೇತಕೆ ಹಾಹಾ ಎಂದಳುವೆ ವಾದಿ**

**ನೇಹ ಪಾತುರವಾದ ಪೂರ್ವಕಾಯಕ್ಕೇನು**
**ಹಾನಿ ಬಂದಿತು ಪೇಳಾ।**
**ಬಾಹುಗಳಿಂದದನಪ್ಪಿ ರಮಿಸಬೇಕು ನೀ ಹೇಳಿದ ಪಂಥಕೆ**

**ಶ್ರೀಹಯವದನ ಇಂತಲ್ಲದಿದ್ದರೆ ನಗುವ**
**ಈಹದವನರಿಯದವನ ಮತ ದುರ್ಮತ ಸಾಹಸ ಸಾಕು ಸಾಕು**

ದೇಹ ಬಿಟ್ಟು, ದೇಹಭಿನ್ನವಾದ ಜೀವ ಇಲ್ಲೆನ್ನುವ ಹೇ ವಾದಿಯೇ (ಚಾರ್ವಾಕನೆ) ನಿನ್ನ ಪ್ರೀತಿ ಪಾತ್ರಳಾದ ಹೆಂಡತಿ ಸಾಯಲು ಏಕೆ ಹಾ ಹಾ ಎಂದು ಗೋಳಾಡಿ ಅಳುವೇ?

ನಿನ್ನ ಪ್ರೀತಿ ಪಾತ್ರವಾದ ಮೊದಲಿದ್ದ ದೇಹಕ್ಕೆ ಏನು ಹಾನಿ ಬಂದಿತು। ನಾಶವಾಗಿದೆಯೇ? ಇಲ್ಲ ನಿನ್ನ ಮತವನ್ನು ಅನುಸರಿಸಿದರೆ ನಿನ್ನ ಬಾಹುಗಳಿಂದ ಆಮೃತದೇಹವನ್ನು ಅಪ್ಪಿಕೊ, ಸುಖಿಸು ಇದು ಸಾಧ್ಯವಿಲ್ಲವೆಂದಾದರೆ ಶ್ರೀ ಹಯವದನನು ನೋಡಿ ನಗುತ್ತಾನೆ. ಹೀಗೆಂಬ ಸತ್ಯ ಸ್ಥಿತಿಯನ್ನು ತಿಳಿಯದವನ ಮತ ದುರ್ಮತವೇ ಸರಿ. ದೇಹಭಿನ್ನವಾದ ಜೀವವಿಲ್ಲ ಎಂದು ವಾದಿಸುವದನ್ನು ನಿಲ್ಲಿಸು ಎಂದು ಪರೋಕ್ಷವಾಗಿ ತಿಳಿಸಿದ್ದಾರೆ. ಚಾರ್ವಾಕರು ಪ್ರತ್ಯಕ್ಷವೊಂದೇ ಪ್ರಮಾಣವೆನ್ನುತ್ತಾರೆ. ದೇಹಭಿನ್ನನಾದ ಜೀವವನ್ನು ಒಪ್ಪುವುದಿಲ್ಲ, ನವಜಾತ ಶಿಶು ತಾಯಿಯ ಸ್ತನ್ಯಪಾನ ಮಾಡಲು ತೊಡಗುತ್ತದೆ. ತಾಯಿಯು ಕಲಿಸಿದ್ದರಿಂದ ಅದು ಪ್ರವರ್ತಕವಾಯಿತು ಎಂದು ಹೇಳಲು ಬರುವದಿಲ್ಲ. ಯಾವ ರೀತಿ ತರ್ಕ ಮಾಡಿದರೂ ಅದು ಜನ್ಮಾಂತರ ಅನುಭವದಿಂದ ಸಾಧ್ಯವೆಂದು ಹೇಳಬೇಕಾಗುತ್ತದೆ.

**ಲೇಖಕ: ರಾಘವೇಂದ್ರ ಎಸ್. ಅಡಬಡ್ಡಿ**
**ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ದೇವನಹಳ್ಳಿ, ಬೆಂಗಳೂರು.**

## ಹಯವದನನ ಅರಿವು - ಬದುಕಿನ ತಿರುವು

ಹರಿದಾಸ ಸಾಹಿತ್ಯವನ್ನು ಪೋಷಿಸಿ ಬೆಳೆಸಿದ ಶ್ರೀಪಾದರಾಜರು, ವ್ಯಾಸರಾಯರು, ವಾದಿರಾಜರು, ಈ ಯತಿತ್ರಯರ ಪೈಕಿ ವಾದಿರಾಜರು ಮೂರನೆಯವರು. ಸೋದೆ ಸಂಸ್ಥಾನಕ್ಕೆ ಸಂಬಂಧಿಸಿದ ಕೆಲವು ಶಾಸನಗಳು ಮತ್ತು ವಾದಿರಾಜರೇ ರಚಿಸಿರುವ ಅಪಾರ ಸಾಹಿತ್ಯರಾಶಿಗಳಿಂದ ಕೆಲವು ವಿವರಗಳನ್ನು ಸಂಗ್ರಹಿಸಬಹುದು.

ಯುಕ್ತಿಮಲ್ಲಿಕೆಯು ಪಾಷಂಡ ಮತವಾದ ಬೌದ್ಧ ಮತ್ತು ಜೈನ್ಯ ಮತಗಳ ನಿರಾಕರಣೆಯಾಗಿದೆ.

ನ್ಯಾಯರತ್ನಾವಲಿಯು ಅದ್ವೈತ ತತ್ವವನ್ನು ನಿರಾಕರಿಸುವ ಗ್ರಂಥವಾಗಿದೆ. **ರುಕ್ಮೀಣಿಶವಿಜಯವು ಶಿಶುಪಾಲ**ವಧೆಗೆ ಪ್ರತಿಯಾಗಿ ಪುಣೆಯಲ್ಲಿದ್ದಾಗ ರಾಜರು ರಚಿಸಿದ ಕಾವ್ಯ.

ಶ್ರೀವಾದಿರಾಜರ ಕೃತಿಯಾದ **ಗುಂಡಕ್ರಿಯೆ**ಯು ಲೋಕಾನುಭವದಲ್ಲಿ ರಚಿತವಾಗಿದೆ. ಚಾರ್ವಾಕ ಮತ ತತ್ವಗಳನ್ನು ನಿರಾಕರಿಸಿ ಮಧ್ವಮತ ತತ್ವಗಳನ್ನು ಪ್ರಚಾರ ಮಾಡಲು ರಚಿಸಿದರೆಂಬುದು ಖಚಿತ, ಅನ್ಯಮತ ಖಂಡನೆ ಸ್ವಮತ ಮಂಡನೆಯ ವಿಷಯದಲ್ಲಿ ಮಾತ್ರ ಈ ಕೃತಿಯನ್ನು ಗಮನಿಸಬೇಕು.

ಬಲ್ಲೆ ಬಲ್ಲೆ ವಿಶ್ವತಚಕ್ಷು ನೀಗಡ ವಿಶ್ವತಶ್ಚಕ್ಷುರುತ ವಿಶ್ವತೋ ಮುಖು (ಋಗ್ವೇದ ಮಂಡಲ 10) ಈಶಣತ್ರಯಗಳೆಂದು ಪ್ರಸಿದ್ಧವಾದ ಹೆಣ್ಣು, ಹೊನ್ನು, ಮಣ್ಣುಗಳ ಮೋಹವನ್ನು ಬಿಟ್ಟವನು ಹದಿನಾಲ್ಕು ಲೋಕಗಳಲ್ಲೂ ಇಲ್ಲ, ಅವುಗಳಿಂದ ಮುಕ್ತನು ಶ್ರೀಹರಿಯೊಬ್ಬನೇ ಸಂತಾನ ಪ್ರಾಪ್ತಿಗಾಗಿಯೇ ಹೆಣ್ಣನ್ನು ಬಯಸದೆ ಹೊಕ್ಕುಳ ಹೂವಿನಲ್ಲೇ ಮಗನನ್ನು ಪಡೆದ ಸಿದ್ಧನು.

**ಲೇಖಕಿ : ಶ್ರೀಮತಿ ಜಯಶ್ರೀ ಗುತ್ತಲ**
**13, ನರಸಿಂಹ ಕೃಪಾ, ಕೇಶವನಗರ, ಸ್ಟೇಟ್ ಬ್ಯಾಂಕ್ ಕಾಲನಿ, ಧಾರವಾಡ - 580007**
**ಲೇಖಕಿ : ಶ್ರೀಮತಿ ಶಕುಂತಲಾ.ಆರ್.ಜಾಗಿರ್‌ದಾರ್**
**ನಂ. 766, 5ನೇ ಮುಖ್ಯರಸ್ತೆ, ಮಹಾಲಕ್ಷ್ಮೀಪುರ, ಬೆಂಗಳೂರು-86.**



ಶ್ರೀ ವಾದಿರಾಜರ ಗುಂಡಕ್ರಿಯೆಯ
ಒಂದು ಅಧ್ಯಯನ

ನಾವೆಲ್ಲ ಜೀವಿಗಳು ಪರಮಾತ್ಮನ ಉದರದಲ್ಲಿದ್ದೇ ಸೃಷ್ಟಿಗೆ ಬಂದವರು ಎಂಬ ಭಾವನೆ ಮನಸ್ಸಿನಲ್ಲಿ ಭಕ್ತಿಯ ದಿವ್ಯತೆಯನ್ನು ಮೂಡಿಸುತ್ತದೆ. ಪ್ರಲಯ ಸಂದರ್ಭದಲ್ಲಿ ನಮ್ಮನ್ನು ತನ್ನ ಉದರದಲ್ಲಿರಿಸಿಕೊಂಡ ಪರಮಾತ್ಮ ಜೀವರುಗಳನ್ನು ಅವರವರ ಯೋಗ್ಯತಾನುಸಾರ ತನ್ನ ಉದರದ ಭಾಗಗಳಲ್ಲಿ ಪ್ರತ್ಯೇಕವಾಗಿ ಇರಿಸಿಕೊಂಡಿರುತ್ತಾನೆ. ಮುಕ್ತಿಯೋಗ್ಯರನ್ನು ಧ್ಯಾನಾವಸ್ಥೆಯಲ್ಲಿ, ತಮೋಯೋಗ್ಯರನ್ನು ನಾಭಿಯ ಕೆಳಭಾಗದಲ್ಲಿ, ನಾಭಿಯ ಮೇಲ್ಭಾಗದಲ್ಲಿ ಅಮುಕ್ತರನ್ನು, ಸೃಷ್ಟಿಕಾರ್ಯ ಪ್ರಾರಂಭವಾಗಲಿಕ್ಕೆ ನಿತ್ಯ ಸಂಸಾರಿಗಳು-ನಿದ್ರಾವಸ್ಥೆಯಲ್ಲಿರುತ್ತಾರೆ. ತ್ರಿವಿಧ ಜೀವರಿಗೆ ಅವರವರ ಗತಿಗಳನ್ನು ನೀಡಲಿಕ್ಕಾಗಿಯೇ ಸೃಷ್ಟ್ಯಾದಿಗಳನ್ನು ಮಾಡುತ್ತಾನೆ. ಸ್ವಪ್ರಯೋಜಕ್ಕಲ್ಲವೆಂದು ರಾಜರು ತಿಳಿಸಿದ್ದಾರೆ.

ಸೃಷ್ಟಿಕಾಲ ಬಂದಾಗ **ಜನಿತೋಥವಿಷ್ಣುಃ** ಎಂಬಂತೆ ತಾನು ನಮ್ಮೊಡನೆ ಪ್ರಕಟಗೊಳ್ಳುತ್ತಾನೆ. ಅನಂತರೂಪ ಧರಿಸುತ್ತಾನೆ. ಪರಮಾತ್ಮನ ಈ ಅದ್ಭುತ ವ್ಯಾಪಾರದ ಚಿಂತನೆ ಸಾಧನೆಗೆ ಇಂಬುಗೊಡುತ್ತದೆ. ತ್ರೈವರ್ಗಜೀವರ ಸೃಜ್ಯಾವಸ್ಥೆಯನ್ನು ಶ್ರೀವಾದಿರಾಜರು ಮಾರ್ಮಿಕವಾಗಿ ವಿವರಿಸಿದ್ದಾರೆ. ಹುಟ್ಟಿಸಿ ಬಹುರೂಪದಾಟವನ್ನಾಡಿಸಿ ಇಷ್ಟಗಳ ಕೊಡುವ. ಅನೇಕ ಯೋನಿಗಳಲ್ಲಿ ಸಂಚರಿಸುವಂತೆ ಮಾಡಿ ಆಯಾ ಜೀವರ ಪ್ರಾರಬ್ಧದಂತೆ ಕರ್ಮದಾಟವನ್ನು ಆಡಿಸುತ್ತಾನೆ.

**ದುಷ್ಟ ಮಕ್ಕಳಮಂಡೆ ಹೆಟ್ಟುವ** ಎಂಬಲ್ಲಿ ತಾಮಸ ಜೀವಿಗಳಿಗೆ ನಿತ್ಯ ನರಕ ಅಂಧಂ ತಮಸ್ಸು ಆಗುವವರೆಗೂ ಈ ಜನನ- ಮರಣ ಚಕ್ರ ಸಾಗಿ ಸಾಧನೆಯಾಗುತ್ತದೆ.

**ಕೆಲವರ ಕಟ್ಟಲೆಯನ್ನು ಬಿಡಿಸ** ಎಂಬಲ್ಲಿ ನಿತ್ಯಸಂಸಾರಿಗಳು ಬಂದು ಹೋಗುವವರು.

**ಶಿಷ್ಯರೆತ್ತಿಕೊಂಬ ಹಯವದನ** ಎನ್ನುವಲ್ಲಿ ಸಾತ್ವಿಕ ಜೀವರನ್ನು, ಸಾಧನಾಪರರನ್ನು, ಮುಕ್ತಿಯೋಗ್ಯರನ್ನು ಎತ್ತಿಕೊಂಬ ಸಾಯುಜ್ಯವೇ ಮೊದಲಾದ ಮುಕ್ತಿಯನ್ನು ನೀಡಿ ಮುಕ್ತಲೋಕಗಳಲ್ಲಿಡುವನು.

ಇಂತಹ ದಿವ್ಯ ಮಹಿಮೆ ಶ್ರೀಹಯವದನನ ಸಾಕ್ಷಾತ್ಕಾರದ ಭಾವದಿಂದ ಎಂಬ ಉಪದೇಶ ನೀಡುತ್ತಾರೆ ಶ್ರೀವಾದಿರಾಜರು.

**ಲೇಖಕಿ: ಡಾ|| ಶ್ರೀಮತಿ ಜಯಲಕ್ಷ್ಮೀಮಂಗಳಮೂರ್ತಿ**
**''ಭಾರತೀಶ'' ಲಕ್ಷ್ಮೀಪುರಂ ಬಡಾವಣೆ, ರಾಯಚೂರು.**

**ಶ್ರೀ ವಾದಿರಾಜರ ಗುಂಡಕ್ರಿಯೆಯ**

**ಒಂದು ಅಧ್ಯಯನ**

## ವಿಷ್ಣುಪದಿಯೆಂಬ ನದಿ-ಗುಂಡಕ್ರಿಯೆ

**ವ್ಯೋಮಕೇಶನೊಬ್ಬ ವ್ಯೋಮಪಾದನೊಬ್ಬ**
**ಭ್ರಾಮಕವರವೀವನೊಬ್ಬ ಕೊಲ್ಲುವನೊಬ್ಬ**
**ಕಾಮದಕ್ಷಾದಿಗಳ**
**ಸೀಮೆಯರಿಯೆ ಕೊಂದವನೊಬ್ಬ ರಕ್ಷಿಸಿದಾ**
**ಮಹಾಪುರುಷನೊಬ್ಬ**
**ರಾಮಾದ್ಯವತಾರದಿಂದ ಮುರಿದ ಬಿಲ್ಲು**
**ಆ ಮಹೇಶನದಲ್ಲವೆ**
**ಶ್ರೀ ಮುಡಿಯಲಿ ವಿಷ್ಣುಪದಿಯೆಂಬ ನದಿಪೊತ್ತ**
**ಆ ಮಹಾದೇವ ಹಯವದನನೆಂತಾಹ ನೀ**
**ಮಾನವನೆಂತಾಹೆಯೊ ॥**

**ವ್ಯೋ** - ಶಬ್ದಕ್ಕೆ ಆಕಾಶ ಮತ್ತು ಜಲಗಳೆಂಬ ಅರ್ಥವಿದೆ. ಶಿವನು ತನ್ನ ಕೇಶದಲ್ಲಿ (ಜಟೆಯಲ್ಲಿ) ಗಂಗೆಯನ್ನು ಧರಿಸಿದ್ದಾನೆ. ವಿಷ್ಣು ಪಾದದಿಂದ ಜನಿಸಿದವಳು ಗಂಗೆ. ವಿಷ್ಣು ಪದವೆಂಬುದು ಆಕಾಶದ ಮತ್ತೊಂದು ನಾಮ. ವಿಷ್ಣುಪಾದದಿಂದ ಉದ್ಭವಿಸಿ ಆಕಾಶಮಾರ್ಗದಿಂದ ಭೂಮಿಗೆ ಇಳಿದು ಬಂದ ಗಂಗೆಗೆ ವಿಷ್ಣುಪದೀ, ಆಕಾಶಗಂಗಾ ಇತ್ಯಾದಿ ಅನ್ವರ್ಥನಾಮಗಳಿವೆ. ಆಕಾಶ ಶಬ್ದವೂ ವಿಷ್ಣುವಾಚಕವೇ - ಪ್ರಕಾಶ ಎಂಬ ಅರ್ಥವುಳ್ಳದ್ದು. ಪಾದ ಶಬ್ದವು ಉತ್ತಮರ ಸ್ವರೂಪವನ್ನು ಹೇಳುತ್ತದೆ. ಆದ್ದರಿಂದ **ವ್ಯೋ** ಎಂದರೆ ಪ್ರಕಾಶ, ಸ್ವರೂಪ ಎಂಬ ಅರ್ಥವೂ ಸಿದ್ಧವಾಗುತ್ತದೆ. ಶಿವ ವಿಷ್ಣುವಿಗಿರುವ ಅಂತರವನ್ನು ಈ ಪದ್ಯದಿಂದ ನಿರೂಪಿಸಿ, ವಿಷ್ಣುವಿನ ಉತ್ತಮತ್ವವನ್ನು ಯುಕ್ತಿಯಿಂದ ಸಾಧಿಸಿದ್ದಾರೆ.

ಲೋಕ ದೃಷ್ಟಿಯಿಂದ ಅಪರಾಧಗಳೇ ಅಲ್ಲದವುಗಳಿಗೆ ಅಥವಾ ಅಲ್ಪಾಪರಾಧಗಳಿಗೆ ಶಿವನು ಚಂಡಶಾಸನವನ್ನು ವಿಧಿಸುತ್ತಾನೆ. ಉದಾ: ಮನ್ಮಥ ದಕ್ಷಾದಿಗಳಿಗೆ ಶಿಕ್ಷಿಸಿದಂತೆ ಶ್ರೀ ವಿಷ್ಣುವಾದರೋ ಭಕ್ತಾಪರಾಧಸಹಿಷ್ಣುವೆಂದೇ ಪ್ರಸಿದ್ಧನಾದವನಲ್ಲವೇ. ತನ್ನನ್ನು ನಿಂದಿಸಿದವರನ್ನು ಕಾಲಿನಿಂದ ಒದ್ದವರನ್ನೂ ಕ್ಷಮಿಸಿ ಅನುಗ್ರಹಮಾಡಿದವನು. ಭೃಗು ಋಷಿವರ್ಯರ ಪರೀಕ್ಷೆ ವರದಿಯನ್ನು ಋಷಿವರ್ಯರೆಲ್ಲರೂ ಕೇಳಿ ವಿಷ್ಣು ಸರ್ವೋತ್ತಮತ್ವವನ್ನು ನಿರ್ಣಯಿಸಿದ ಪ್ರಸಂಗವೇ ಸಾಕ್ಷೀ ಭೂತವಾಗಿದೆ.



**ಶ್ರೀ ವಾದಿರಾಜರ ಗುಂಡಕ್ರಿಯೆಯ**

**ಒಂದು ಅಧ್ಯಯನ**

ಇನ್ನು ವರ-ಶಾಪ ಪ್ರಧಾನ ಮಾಡುವುದರಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರು ಸಮರ್ಥರು. ಶಿವನು ಶೀಘ್ರವಾಗಿ ಪ್ರಸನ್ನನಾಗಿ ಅಲ್ಪ ತಪಸ್ಸಿಗೇ ಮೆಚ್ಚಿ ವರ ಹಾಗೂ ಶಾಪಗಳನ್ನು ಕೊಡುತ್ತಾನೆ. ಬ್ರಹ್ಮನೂ ಅದರಂತೆಯೇ ಆದರೆ ವಿಷ್ಣು ಅಷ್ಟು ಸುಲಭವಾಗಿ ಒಲಿಯುವವನಲ್ಲ, ಇದಕ್ಕೆ ಜ್ಞಾನಿಗಳು ಇತಿಹಾಸವೊಂದನ್ನು ತಿಳಿಸುತ್ತಾರೆ. ಶಿವನು ವೃಕಾಸುರನಿಗೆ ವರವನ್ನಿತ್ತು ವಿಪತ್ತಿಗೆ ಗುರಿಯಾಗಿ ವಿಷ್ಣುವಿನಿಂದ ರಕ್ಷಿತನಾದನು. ವರವನ್ನು ಪಡೆದ ವೃಕಾಸುರ ಅದರಿಂದ ತನ್ನ ಆತ್ಮನಾಶವನ್ನೇ ಹೊಂದಿದನು. ಹೀಗೆ ಬ್ರಹ್ಮ ರುದ್ರಾದಿಗಳಿಂದ ಅಜೇಯತ್ವ. ಅವಧ್ಯತ್ವ ವರಗಳನ್ನು ಪಡೆದು, ಉನ್ಮತ್ತರಾಗಿ ಲೋಕ ಕಂಟಕರಾಗಿ ಮೆರೆದು ಕಡೆಯಲ್ಲಿ ಶ್ರೀಕೃಷ್ಣನಿಂದ ಹತರಾದ ಅಸುರರ ಅಸಂಖ್ಯ ಉದಾಹರಣೆಗಳು ಪುರಾಣ ಇತಿಹಾಸಗಳಲ್ಲಿ ಕಂಡುಬಂದಿವೆ.

ವಿಷ್ಣು ಪ್ರಸಾದ ದೊರೆಯುವುದು ಕಷ್ಟವಾದರೂ, ಅದು ದೊರೆತಾದನಂತರ ವಿಷ್ಣುಭಕ್ತರು ಮೋಕ್ಷಾದಿ ಪುರುಷಾರ್ಥಗಳನ್ನೇ ಹೊಂದಿ ತಾವೂ ಸುಖಿಗಳಾಗುವುದರ ಜೊತೆಗೆ ಲೋಕಕ್ಕೂ ಸುಖಪ್ರದರಾಗುತ್ತಾರೆ. ಇದೇ ರೀತಿಯಾಗಿ ಶಿವಾದಿಗಳಿಂದ ದತ್ತವಾದ ಶಾಪಗಳೂ ಸಹ ಶ್ರೀಹರಿಪ್ರಸಾದದಿಂದ ಪರಿಹೃತವಾದ ನಿದರ್ಶನಗಳು ಹೇರಳವಾಗಿ ದೊರೆಯುತ್ತವೆ. ಈ ಪ್ರಕರಣಗಳು ಶಿವನಿಗಿಂತ ಶ್ರೀಹರಿಯೇ ಉತ್ತಮನೆಂದು ಯುಕ್ತಿ ಯುಕ್ತವಾಗಿ ಸಾಧಿತವಾಗುತ್ತವೆಂಬುದರಲ್ಲಿ ಎರಡು ಮಾತಿಲ್ಲ.

**ಲೇಖಕ : ಎಸ್.ಜಿ. ರಾಮಚಂದ್ರರಾಯ**
**ನಂ. 252, 6ನೇ ಅಡ್ಡರಸ್ತೆ, ಶ್ರೀನಿವಾಸನಗರ, ಬೆಂಗಳೂರು -560050**

## ಶ್ರದ್ಧಾಂಜಲಿ



ನಾಲ್ಕುತಲೆಮಾರಿನ ಯತಿಗಳನ್ನು ಕಂಡ 40 ವರ್ಷ ಅವಿರತ ಶ್ರೀಗೋಪೀನಾಥದೇವರ ಸೇವೆಯನ್ನು ಸಲ್ಲಿಸಿದ, ವಯೋವೃದ್ದರೂ, ಬ್ರಹ್ಮಚಾರಿಗಳೂ ಆದ **ಶ್ರೀ ಎಂ. ವೆಂಕೋಬಾಚಾರ್** ರವರು ದಿನಾಂಕ 28-2-2010ರಂದು ದೈವಾಧೀನರಾದ ವಿಷಯವನ್ನು ತಿಳಿಸಲು ಶ್ರೀ ಶ್ರೀಪಾದರಾಜ ಮಠದ ಸಿಬ್ಬಂದಿ ವರ್ಗವು ವಿಷಾದಿಸುತ್ತದೆ.